ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ
# ಸೂರ್ಯ ಪ್ರಗತಿ
SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ
suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27
Volume: 05 ಸಂಪುಟ: 05 | Issue:05 ಸಂಚಿಕೆ: 05 | Date: 07-01-2026 Wednesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ಸಂಕ್ರಾಂತಿಯ ನಂತರ ಸಚಿವ ಸಂಪುಟದ ಬಗ್ಗೆ ಚರ್ಚೆ–ಸಿಎಂ



ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರು ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ದಾಖಲೆ ಸರಿಗಟ್ಟಲು ಜನರ ಆಶೀರ್ವಾದವೇ ಕಾರಣ. ಅರಸುರವರು ಮೈಸೂರಿನವರೇ ಆಗಿರುವುದು ಸಂತೋಷದ ಸಂಗತಿ. ತಾಲ್ಲೂಕು ಬೋರ್ಡ್ ಸದಸ್ಯನಾದ ನಂತರದ ನನ್ನ ರಾಜಕೀಯ ಜೀವನದಲ್ಲಿ ಸಚಿವನಾಗುವ ಮತ್ತು ಮುಖ್ಯಮಂತ್ರಿಯಾಗುವ ನಿರೀಕ್ಷೆಯಿರಲಿಲ್ಲ. 13 ಚುನಾವಣೆಗಳನ್ನೂ ಎದುರಿಸಿ 8ಕ್ಕೂ ಹೆಚ್ಚು ಬಾರಿ ಗೆಲುವು ಸಾಧಿಸಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಕಡಿಮೆ ಜನಸಂಖ್ಯೆಯ ಅರಸು ಸಮುದಾಯದವರಾಗಿದ್ದ ದೇವರಾಜ ಅರಸು ಅವರು ಜನಪ್ರಿಯ ನಾಯಕರಾಗಿದ್ದರು. ಅಂತಹ ಮಹಾನ್ ನಾಯಕನಿಗೂ ಮತ್ತು ನನಗೂ ಹೋಲಿಕೆ ಸರಿಯಲ್ಲ. ಅರಸು ಅವರ ಅವಧಿಯಲ್ಲಿ ರಾಜ್ಯದ ಪರಿಸ್ಥಿತಿ ವಿಭಿನ್ನವಾಗಿತ್ತು. ಅವರು ಒಂದು ಬಾರಿ ಅವಿರೋಧವಾಗಿಯೂ ಆಯ್ಕೆಯಾಗಿದ್ದರು ಎಂದರು. ದಾಖಲೆಗಳು ಮುರಿಯಲೆಂದೇ ನಿರ್ಮಾಣವಾಗುತ್ತವೆ. ಪ್ರಸ್ತುತ ನಾನು ಪೂರೈಸಲಿರುವ ಅವಧಿಯನ್ನು ಮೀರಲಿರುವ ಮತ್ತೊಬ್ಬ ನಾಯಕರೂ ಮುಂದೆ ಬರಬಹುದು. ನನಗಿಂತ ಹೆಚ್ಚಿನ ಬಾರಿ ಬಜೆಟ್ ಮಂಡಿಸುವ ನಾಯಕರೂ ಮುಂದೆ ಬರಬಹುದು ಎಂದು ಹೇಳಿದರು.

ಬಜೆಟ್ ತಯಾರಿಯನ್ನು ಸಂಕ್ರಾಂತಿಯ ನಂತರ ಪ್ರಾರಂಭಿಸಲಾಗುವುದು. ಸಂಪುಟ ಪುನರ್ರಚನೆಯ ಬಗ್ಗೆ ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸುತ್ತೇನೆ ಎಂದರು.

ರಾಜ್ಯಕ್ಕೆ ಜಿಎಸ್‌ಟಿ ಯಿಂದ ವಾರ್ಷಿಕವಾಗಿ 12 ರಿಂದ 15 ಸಾವಿರ ಕೋಟಿ ರೂ.ಗಳು ನಷ್ಟವಾಗುತ್ತಿದ್ದು, ಇದು ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಕಾಲದಿಂದಲೂ ಮನರೇಗಾ ಯೋಜನೆಗೆ ಸಂಪೂರ್ಣವಾಗಿ ಕೇಂದ್ರವೇ ಅನುದಾನ ನೀಡುತ್ತಿತ್ತು. ಆದರೆ ಈಗ ಈ ಯೋಜನೆಯನ್ನು ರದ್ದುಪಡಿಸಿದ್ದು, ಇದರಿಂದ ಕಾರ್ಮಿಕರು, ಸಣ್ಣ ರೈತರು, ಬಡ ಮಹಿಳೆಯರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಬಡವರಿಗೆ ನೀಡಲಾಗುತ್ತಿದ್ದ ಕೆಲಸದ ದಿನಗಳು ಕಡಿಮೆಯಾಗಲಿದೆ. ಈ ಮೂಲಕ ಜನರ ಮೂಲಭೂತ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಇದು ಅಸಂವಿಧಾನಿಕ ಕ್ರಮ. ಈ ಕಾಯ್ದೆಯಂತೆ ಕಾಮಗಾರಿಗಳಿಗೆ ಕೇಂದ್ರ ಮತ್ತು ರಾಜ್ಯ 60:40 ರಷ್ಟು ಅನುದಾನವನ್ನು ನೀಡಬೇಕಾಗಿದೆ. ಇದರಿಂದ ರಾಜ್ಯ ಸರ್ಕಾರದ ಮೇಲೆ ಸುಮಾರು 3,000 ಕೋಟಿ ರೂ.ಗಳ ಹೊರೆ ಬೀಳಲಿದೆ ಎಂದರು.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ಹುಲಿ ಕಾಣಿಸಿಕೊಳ್ಳುತ್ತಿರುವ ಬಗ್ಗೆ ನಾಳೆ ಅರಣ್ಯ ಇಲಾಖೆಯೊಂದಿಗೆ ಸಭೆ ನಿಗದಿಯಾಗಿದೆ. ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದ್ದು, ಅರಣ್ಯಗಳಿಂದ ಜನವಸತಿ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿದೆ. ಹುಲಿಯನ್ನು ಸೆರೆಹಿಡಿಯಲು ಸಿಬ್ಬಂದಿಗೆ ಸೂಚನೆ ನೀಡಲಾಗಿದ್ದು, ಸೆರೆಹಿಡಿದ ಹುಲಿಗಳನ್ನು ಮತ್ತೊಂದು ಅರಣ್ಯ ಪ್ರದೇಶಕ್ಕೆ ವರ್ಗಾಯಿಸಲು ಸೂಚಿಸಲಾಗಿದೆ. ಮೈಸೂರಿನ ಅರಮನೆಯ ಮುಂಭಾಗದಲ್ಲಿ ಹೀಲಿಯಂ ಸಿಲಿಂಡರ್ ಸ್ಫೋಟದಲ್ಲಿ ಮೃತರಾದ ಮಹಿಳೆಯರಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ನೀಡಲಾಗುವುದು ಎಂದು ಹೇಳಿದರು.

## ಅಭಿವೃದ್ಧಿಗೆ ಹಣ ಕೇಳಿದರೆ ಕಾಂಗ್ರೆಸ್ ಪಕ್ಷಕ್ಕೆ ಬಾ ಅಂತಾರೆ : ಸಿಎಂ ವಿರುದ್ಧ ಶಾಸಕ ಎಂಟಿ ಕೃಷ್ಣಪ್ಪ ಗಂಭೀರ ಆರೋಪ




ತುಮಕೂರು : ರಾಜ್ಯದ ಇತಿಹಾಸದಲ್ಲಿ ಡಿ. ದೇವರಾಜು ಅರಸು ಅವರ ಬಳಿಕ ದೀರ್ಘಾವಧಿ ಮುಖ್ಯಮಂತ್ರಿ ಆಗಿ ಸಿಎಂ ಸಿದ್ದರಾಮಯ್ಯ ಇಂದು ದೇವರಾಜ್ ಅರಸು ಅವರ ದಾಖಲೆ ಸರಿಗಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಜೆಡಿಎಸ್ ಶಾಸಕ ಎಂ ಟಿ ಕೃಷ್ಣಪ್ಪ ಗಂಭೀರವಾದ ಆರೋಪ ಮಾಡಿದ್ದು ಅಭಿವೃದ್ಧಿಗೆ ಹಣ ಕೇಳಿದರೆ ಕಾಂಗ್ರೆಸ್ ಪಕ್ಷಕ್ಕೆ ಬಾ ಅಂತ ಸಿಎಂ ಸಿದ್ದರಾಮಯ್ಯ ಅವಾನಿಸಿದ್ದಾರೆ ಎಂದು ಗಂಭೀರವಾದ ಆರೋಪ ಮಾಡಿದರು.ತುಮಕೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಭಿವೃದ್ಧಿಗೆ ಹಣ ಕೇಳಿದರೆ ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷಕ್ಕೆ ಕರೆಯುತ್ತಾರೆ. ಕಾಂಗ್ರೆಸ್ ಗೆ ಬಂದರೆ ಕ್ಷೇತ್ರದ ಅಭಿವೃದ್ಧಿಗೆ ಹಣ ಕೊಡುತ್ತೇನೆ ಅಂತಾರೆ ತುಮಕೂರಿನಲ್ಲಿ ತುರುವೇಕೆರೆ ಜೆಡಿಎಸ್ ಶಾಸಕ ಎಂ ಟಿ ಕೃಷ್ಣಪ್ಪ ಮಾತನಾಡಿ ಬೆಳಗಾವಿ ಅಧಿವೇಶನದಲ್ಲಿ ಚೇಂಬರ್ ಗೆ ಕರೆದು ನನ್ನನ್ನು ಪಕ್ಷಕ್ಕೆ ಆಹ್ವಾನಿಸಿದರು. ತುರುವೇಕೆರೆಗೆ ಒಂದು ಲಾ ಕಾಲೇಜು ಹಾಗು ಪಾಲಿಟೆಕ್ನಿಕ್ ಕಾಲೇಜು ಕೇಳಿದ್ದೆ ಆ ಕಾಲೇಜು ಬೇಕಾದರೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಆಗುವಂತ ಹೇಳುತ್ತಾರೆ ಇಂತಹ ಸಿದ್ದರಾಮಯ್ಯ ಈಗ ಅರಸು ದಾಖಲೆ ಸರಿಗಟ್ಟಿದ್ದಾರೆ ಅಂತಾರೆ.ಆದರೆ ಸಿಎಂ ಸ್ಥಾನದಲ್ಲಿ ಎಷ್ಟು ದಿನ ಇದೆ ಅನ್ನೋದು ಮುಖ್ಯವಲ್ಲ ಏನು ಮಾಡಿದೆ ಅನ್ನೋದು ಮುಖ್ಯ. ಇನ್ನಾದರೂ ಅಭಿವೃದ್ಧಿ ಕೆಲಸ ಮಾಡಲಿ ಕುರ್ಚಿ ಕಿತ್ತಾಟ ಬಿಟ್ಟು ಜನಪರ ಕೆಲಸ ಮಾಡಲಿ. ಭ್ರಷ್ಟಾಚಾರ ತುಂಬಿತುಳುಕುತಿದೆ ಇದಕ್ಕೆ ಸಿಎಂ ಸಿದ್ದರಾಮಯ್ಯ ಕಡಿವಾಣ ಹಾಕಲಿ. ಜನರಿಗೆ ಗ್ಯಾರಂಟಿ ಕೊಟ್ಟು ಏನು ಮಾಡಿದಿರಿ? ಅಭಿವೃದ್ಧಿ ಹಳ್ಳ ಹಿಡಿದಿದೆ. ಜಾತಿ ಸಂಘರ್ಷ ತಂದು ಹಾಕಿ ರಾಜ್ಯ ಹಾಳು ಮಾಡಿದಿರಿ ಎಂದು ವಾಗ್ದಾಳಿ ನಡೆಸಿದರು.

## ಕಲುಷಿತ ನೀರು, ಮಾಲಿನ್ಯ ದೂರಿಗೆ ಕಂಟ್ರೋಲ್ ರೂಮ್: ಜಿಲ್ಲಾಧಿಕಾರಿ ಶುಭ ಕಲ್ಯಾಣ್



ತುಮಕೂರುಕಲುಷಿತ ನೀರು, ಮಾಲಿನ್ಯ ಸೇರಿದಂತೆ ಯಾವುದೇ ಪ್ರಕೃತಿ ವಿಕೋಪದಂತಹ ದೂರುಗಳಿದ್ದಲ್ಲಿ ಸಾರ್ವಜನಿಕರು ಕಂಟ್ರೋಲ್ ರೂಮ್ ನಂಬರಿಗೆ ದೂರು ನೀಡುವಂತೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು, ಕಲುಷಿತ ನೀರು, ಮಾಲಿನ್ಯ ಸೇರಿದಂತೆ ಯಾವುದೇ ದೂರುಗಳಿದ್ದಲ್ಲಿ ಸಾರ್ವಜನಿಕರು ಜಿಲ್ಲೆಯಲ್ಲಿ ತೆರೆಯಲಾಗಿರುವ ಕಂಟ್ರೋಲ್ ರೂಮ್ ದೂರವಾಣಿ ಸಂಖ್ಯೆ 7304975519, ಅಥವಾ 0816–2213400, 155304 ಈ ನಂಬರಿಗೆ ಸಾರ್ವಜನಿಕರು ದೂರು ಸಲ್ಲಿಸಬೇಕು. ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಸ್ಪಂದಿಸಿ ಹೆಚ್ಚಿನ ಅನಾಹುತ ಆಗುವುದನ್ನು ತಪ್ಪಿಸಬಹುದಾಗಿದೆ ಎಂದರು.

ಮಧುಗಿರಿ, ಶಿರಾ, ಕೊರಟಗೆರೆ ಭಾಗಗಳಲ್ಲಿ ಕುಡಿಯಲು ಯೋಗ್ಯವಲ್ಲದ ನೀರು ಸರಬರಾಜಾಗುತ್ತಿರುವ ಬಗ್ಗೆ ಪ್ರಯೋಗಾಲಯದ ವರದಿ ಬಂದಿದ್ದು, ಈಗಾಗಲೆ ಅಧಿಕಾರಿಗಳು ಕಾರ್ಯೋನ್ಮುಖರಾಗಿದ್ದಾರೆ. ಅಲ್ಲದೆ ಬಯಲು ಶೌಚ ಇನ್ನಿತರ ಸಾಂಕ್ರಾಮಿಕ ರೋಗ ಹರಡಬಹುದಾದ ವಿಷಯಗಳ ಬಗ್ಗೆ ಗಮನ ಹರಿಸುವಂತೆ ಜಿಲ್ಲಾಧಿಕಾರಿ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಿದರು.

ಸಾಂಕ್ರಾಮಿಕ ರೋಗಗಳು ಹರಡಬಹುದಾದ ವಿದ್ಯಾರ್ಥಿನಿಲಯಗಳ ನೀರು ಸರಬರಾಜು, ಜಾತ್ರೆ, ಹಬ್ಬಗಳ ಬಗ್ಗೆ ಹೆಚ್ಚಿನ ನಿಗಾವಹಿಸಬೇಕೆಂದು ತಿಳಿಸಿದ ಅವರು, ತಮ್ಮ ತಾಲೂಕುಗಳಲ್ಲಿ ಯಾವ ಹಬ್ಬ, ಜಾತ್ರೆಗಳು ನಡೆಯುತ್ತವೆ, ಹೆಚ್ಚು ಜನರು ಸೇರುವ ಜಾಗಗಳ ಬಗ್ಗೆ ಮುಂಜಾಗ್ರತೆ ವಹಿಸಬೇಕು ಎಂದ ಅವರು ಜಾತ್ರೆ ಮತ್ತು ಹಬ್ಬ ಆಚರಣೆಗೆ ಅನುಮತಿಸುವ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗಗಳ ಹಾಗೂ ಎಚ್ಚರಿಕೆಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದರು.

ಊರುಹಬ್ಬ, ಜಾತ್ರೆ ನಡೆಸಲು ತಹಸೀಲ್ದಾರ್ ಅನುಮತಿ ಕಡ್ಡಾಯವಾಗಿ ಪಡೆಯಬೇಕು ಎಂದ ಅವರು, ತಾಲೂಕು ಆಡಳಿತದ ಅನುಮತಿ ಇಲ್ಲದೆ ಹಬ್ಬ ಅಥವಾ ಜಾತ್ರೆ ನಡೆದ ಬಗ್ಗೆ ದೂರುಗಳು ಬಂದರೆ ಸಂಬಂಧಿಸಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರ್ವಜನಿಕವಾಗಿ ಆಯೋಜನೆಗೊಳ್ಳುವ ಊರ ಹಬ್ಬ/ಜಾತ್ರೆಗಳ ವೇಳೆ ಆಹಾರ/ಪ್ರಸಾದ ಮತ್ತು ಕುಡಿಯುವ ನೀರಿನಿಂದ ಹರಡಬಹುದಾದ ಕಾಯಿಲೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ ಆರೋಗ್ಯ ಇಲಾಖೆ ಸಮನ್ವಯದೊಂದಿಗೆ ಸಂಪೂರ್ಣ ಮೇಲುಸ್ತುವಾರಿ ವಹಿಸಲು ಸೂಚಿಸಿದರು.

ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಊರ ಹಬ್ಬ/ಜಾತ್ರೆಗಳ ಅವಧಿಗೂ ಮುನ್ನವೇ ಜಾತ್ರೆ/ಹಬ್ಬ ಆಯೋಜಕರಿಗೆ/ಗ್ರಾಮಸ್ಥರಿಗೆ ಕುಡಿಯುವ ನೀರಿನ ನಿರ್ವಹಣೆ, ಆಹಾರ/ಪ್ರಸಾದ ತಯಾರಿಸುವ ಸ್ಥಳದ ಶುಚಿತ್ವ, ತ್ಯಾಜ್ಯ ವಿಸರ್ಜನ ಮತ್ತು ಶೌಚಾಲಯಗಳ ಕುರಿತಂತೆ ಸೂಕ್ತ ಮಾರ್ಗದರ್ಶನ/ಅರಿವುಮೂಡಿಸಬೇಕು. ಊರ ಹಬ್ಬ/ಜಾತ್ರೆ ವೇಳೆ ವಿತರಿಸುವ ಕುಡಿಯುವ ನೀರನ್ನು ಪಡೆದ ನೀರಿನ ಮೂಲ, ಅದರ ಗುಣಮಟ್ಟ, ಸಾಗಿಸಲು ಉಪಯೋಗಿಸುವ ಟ್ಯಾಂಕರ್ ಮತ್ತು ಶೇಖರಿಸುವ ಟ್ಯಾಂಕ್‌ಗಳ ಶುಚಿತ್ವದ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಆಹಾರ/ಪ್ರಸಾದ ತಯಾರಿಸಲು ಬಳಸುವ ನೀರು ಮತ್ತು ಅಡುಗೆ ಪ್ರದೇಶದ ಸುತ್ತಮುತ್ತ ಶುಚಿತ್ವದ ಬಗ್ಗೆ, ಪರಿವೀಕ್ಷಣೆ ನಡೆಸಬೇಕಲ್ಲದೆ, ಕುಡಿಯುವ ನೀರು/ಆಹಾರ/ಪ್ರಸಾದ ವಿತರಿಸುವವರು ವೈಯಕ್ತಿಕ ಸ್ವಚ್ಛತೆಯ ಬಗ್ಗೆ ಗಮನಹರಿಸಬೇಕು. ತ್ಯಾಜ್ಯ ವಿಸರ್ಜನೆ ಸ್ಥಳಗಳು ಮತ್ತು ಶೌಚಾಲಯಗಳಿಂದ ಕುಡಿಯುವ ನೀರು/ಆಹಾರ/ಪ್ರಸಾದ ವಿತರಿಸುವ ಸ್ಥಳಗಳಲ್ಲಿ ಅಗತ್ಯ ಅಂತರ ಕಾಪಾಡುವುದು, ಕ್ರಮಬದ್ದವಾಗಿ ತ್ಯಾಜ್ಯ ವಿಲೇವಾರಿ ಮಾಡುವುದೂ ಸೇರಿದಂತೆ ಮನೆಗಳಲ್ಲಿ ಎಲ್ಲಾ ಗ್ರಾಮಸ್ಥರು ಮುಖ್ಯವಾಗಿ ವೃದ್ಧರು, ಗರ್ಭಿಣಿ/ಬಾಣಂತಿ ಅನಾರೋಗಿಗಳು ಕಾಯಿಸಿ ಆರಿಸಿದ ನೀರನ್ನು ಸೇವಿಸುವಂತೆ ಸೂಚಿಸಬೇಕು.

ಗ್ರಾಮಗಳಲ್ಲಿನ ಕೊಳವೆಬಾವಿ, ಪೈಪ್‌ಲೈನ್ ಓಹೆಚ್‌ಟಿ ಆರ್‌ಓ ಪ್ಲಾಂಟ್ ಇತ್ಯಾದಿಗಳು ಸುಸ್ಥಿತಿಯಲ್ಲಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಊರ ಹಬ್ಬ/ಜಾತ್ರೆಗಳ ಅವಧಿಯಲ್ಲಿ ಸಂಬಂಧಪಟ್ಟ ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿ ನೌಕರರು ಗ್ರಾಮಸ್ಥರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಆರೋಗ್ಯದಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಕೂಡಲೇ ಆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಮಾಡಬೇಕೆಂದು ಸೂಚನೆ ನೀಡಿದರು.

ಯಾವುದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ಮತ್ತು ಕಾನೂನು ಸುವ್ಯವಸ್ಥೆಗೆ ತೊಂದರೆಯಾಗದಂತೆ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ತುಮಕೂರು ಜಿಲ್ಲೆಯ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವಲ್ಲಿ ಕೈಗೊಳ್ಳಬೇಕಾದ ಎಲ್ಲಾ ಅಗತ್ಯ ಕ್ರಮಗಳ ಕುರಿತು ಯಾವುದೇ ಅಧಿಕಾರಿ ನಿರ್ಲಕ್ಷ್ಯತೆ ತೋರಿದ್ದಲ್ಲಿ ಅಂತಹ ಅಧಿಕಾರಿ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ನಿರ್ದೇಶನ ನೀಡಿದರು.

ಮುಂದಿನ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಹಾಗೂ ತಾಲೂಕು ಮಟ್ಟದಲ್ಲಿ ನಡೆಸಿದ ಸಭೆಯ ಕುರಿತಾಗಿ ಜಿಲ್ಲಾ ಸಭೆಗೆ ಮಾಹಿತಿ ನೀಡುವಂತೆ ಅವರು ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ಸೇರಿದಂತೆ ಎಲ್ಲ ಹಂತದ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಹುಳಿಯಾರಿನಲ್ಲಿ ಆಹಾರ ಮೇಳ : 50 ಕ್ಕೂ ಹೆಚ್ಚು ಬಗೆಯ ಖಾದ್ಯಗಳು, ಆಹಾರ ಪ್ರಿಯರಿಗೆ ರಸದೌತಣ



ಹುಳಿಯಾರು: ಹೊಸ ವರ್ಷದ ಪ್ರಯುಕ್ತ ವಾಸವಿ ಯುವಜನ ಸಂಘದ ವತಿಯಿಂದ ಹುಳಿಯಾರು ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ವಿಶೇಷ ಆಹಾರ ಮೇಳ2026 ತಿಂಡಿ ಪ್ರಿಯರ ಮನಗೆದ್ದಿತು. ಚುಮುಚುಮು ಚಳಿಯ ನಡುವೆ ಬಿಸಿಬಿಸಿ ಖಾದ್ಯಗಳ ಸವಿ ಸವಿಯಲು ನೂರಾರು ಜನ ಆಗಮಿಸಿದ್ದು, ಆಹಾರ ಪ್ರಿಯರಿಗೆ ಈ ಮೇಳವು ವಿನೂತನ ಅನುಭವ ನೀಡಿತು. ಸಂಜೆ 4 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ನಡೆದ ಈ ತಿಂಡಿ ಮೇಳವು ಅತ್ಯಂತ ಶಿಸ್ತಿನಿಂದ, ಯಶಸ್ವಿಯಾಗಿ ಸಂಪನ್ನಗೊಂಡಿತು.

ಒಟ್ಟು 11 ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ಒಂದೊಂದು ಮಳಿಗೆಯಲ್ಲೂ ಒಂದೊಂದು ವಿಭಿನ್ನ ತಿಂಡಿ ತಿನಿಸುಗಳನ್ನು ತಯಾರಿಸುವ ವ್ಯವಸ್ಥೆ ಮಾಡಲಾಗಿತ್ತು. ವಿಶೇಷವಾಗಿ ಒಂದು ಸ್ಟಾಲ್‌ನಲ್ಲಿ ತಯಾರಿಸಿದ ತಿಂಡಿಯನ್ನು ಮತ್ತೊಂದು ಸ್ಟಾಲ್‌ನಲ್ಲಿ ಮಾಡುವಂತಿರಲಿಲ್ಲ ಎಂಬ ವಿಶಿಷ್ಟ ಯೋಜನೆಯಿಂದ, ಮೇಳಕ್ಕೆ ಆಗಮಿಸಿದವರಿಗೆ ನಾನಾ ಬಗೆಯ ಹೊಸ ಹೊಸ ರುಚಿಗಳನ್ನು ಸವಿಯುವ ಅಪರೂಪದ ಅವಕಾಶ ದೊರೆಯಿತು. ಟೋಕನ್ ವ್ಯವಸ್ಥೆ ಮೂಲಕ ಸಾರ್ವಜನಿಕರಿಗೆ ತಮ್ಮಿಷ್ಟದ ಖಾದ್ಯಗಳನ್ನು ಸುಲಭವಾಗಿ ಪಡೆಯಲು ವ್ಯವಸ್ಥೆ ಕಲ್ಪಿಸಲಾಗಿತ್ತು.

ಚುಮುಚುಮು ಚಳಿಗಾಲದ ವಾತಾವರಣದಲ್ಲಿ ಬಿಸಿ ಬಿಸಿ ತಿಂಡಿಗಳು ಮೇಳದ ಆಕರ್ಷಣೆಯಾಗಿತ್ತು. ನೂರಾರು ಮಂದಿ ಕುಟುಂಬ ಸಮೇತವಾಗಿ ಮೇಳಕ್ಕೆ ಆಗಮಿಸಿ, ಮಹಿಳೆಯರು, ಮಕ್ಕಳು ಸೇರಿದಂತೆ ಎಲ್ಲ ವಯೋಮಾನದವರು ತಿಂಡಿ ಸವಿದು ಸಂಭ್ರಮಿಸಿದರು. ತಿಂಡಿ ತಯಾರಿಕೆಯಲ್ಲಿ ಮಹಿಳೆಯರು ತಮ್ಮ ಕೈಚಳಕ, ನೈಪುಣ್ಯ ಮತ್ತು ಸಾಂಪ್ರದಾಯಿಕ ರುಚಿಯನ್ನು ಪ್ರದರ್ಶಿಸಿದರು. 11 ಕೌಂಟರ್‌ಗಳಲ್ಲಿ 50 ಕ್ಕೂ ಹೆಚ್ಚು ವೈವಿಧ್ಯಮಯ ತಿಂಡಿ ತಿನಿಸುಗಳು ಲಭ್ಯವಿದ್ದವು.

ಮೇಳದಲ್ಲಿ ಹೋಂಮೇಡ್ ಚಾಕಲೇಟ್, ಅಗಸೆ ಬೀಜದ ಉಂಡೆ, ಮಶ್ರೂಮ್ ಬೋಂಡ, ಅವರೆ ಬೇಳೆ ವಡೆ, ಅವರೆ ಬೇಳೆ ರೊಟ್ಟಿ, ಅಲಸಂದೆ ಕಾಳು ವಡೆ, ಪಾನಿಪುರಿ, ಟಿಕ್ಕಿ ಪುರಿ, ಮಸಾಲೆ ಪುರಿ, ಮಂಚೂರಿ, ಬದನೆಕಾಯಿಮೆಣಸಿನಕಾಯಿಕ್ಯಾಪ್ಸಿಕಂ ಮಸಾಲೆ ಬೋಂಡಾ, ಕಚೋರಿ, ಮಂಗಳೂರು ಬಜ್ಜಿ, ಸಬ್ಬಕ್ಕಿ ಉಪ್ಪಿಟ್ಟು, ಚಿರುಮುರಿ, ಗಿರ್ಮಿಟ್, ಪಾವ್ ಬಾಜಿ, ಮಳಕೆ ಕಾಳು ಉಸ್ಲಿ, ನಿಪ್ಪಟ್ಟು ಮಸಾಲ, ಬಂಗಾರಪೇಟೆ ಪಾನಿಪುರಿ, ಹೆಸರುಬೇಳೆ ಕಾಂಗ್ರೆಸ್ ಪಾಪುಡಿ ಮಸಾಲೆ, ದಮ್ ಬಿರಿಯಾನಿ, ಸ್ಪೆಷಲ್ ಪಿಜ್ಜಾ ಸೇರಿದಂತೆ ಅನೇಕ ಬಗೆಯ ಸ್ಥಳೀಯ ಹಾಗೂ ಸಾಂಪ್ರದಾಯಿಕ ತಿಂಡಿ ತಿನಿಸುಗಳು ಜನರನ್ನು ಸೆಳೆದವು. ತಿಂಡಿ ತಿಂದ ನಂತರ ಅರಗಿಸಲು ಹರ್ಬಲ್ ಸೋಡಾ ಕೂಡ ವಿಶೇಷ ಆಕರ್ಷಣೆಯಾಗಿತ್ತು.



ಅತ್ಯಧಿಕ ಮಾರಾಟವಾದ ಸ್ಟಾಲ್‌ಗೆ ಬಹುಮಾನ ನೀಡಲಾಗಿದ್ದು, ತಿಂಡಿ ತಯಾರಿಸಿದ ತಂಡಗಳಿಗೆ ಪ್ರೋತ್ಸಾಹ ದೊರಕಿತು. ಮೇಳದ ಅಂತಿಮ ಘಟ್ಟದಲ್ಲಿ ಫೈರ್ ಕ್ಯಾಂಪ್ ಹಾಗೂ ಡಿಜೆ ಮ್ಯೂಸಿಕ್ ಕಾರ್ಯಕ್ರಮಗಳು ನಡೆಯುವ ಮೂಲಕ ಸಂಭ್ರಮ ಇನ್ನಷ್ಟು ಹೆಚ್ಚಾಯಿತು.

ಈ ಸಂಪೂರ್ಣ ಆಹಾರ ಮೇಳವನ್ನು ವಾಸವಿ ಯುವಜನ ಸಂಘವು ಅತ್ಯಂತ ಶಿಸ್ತಿನಿಂದ ಆಯೋಜಿಸಿದ್ದು, ಸಂಘದ ಅಧ್ಯಕ್ಷರಾದ ಮನೋಜ್ ಟಿ.ಆರ್. ಹಾಗೂ ಕಾರ್ಯದರ್ಶಿ ದುರ್ಗಾ ಪ್ರಸಾದ್ ಅವರ ನೇತೃತ್ವದಲ್ಲಿ ತಂಡದ ಸದಸ್ಯರು ನಿರಂತರವಾಗಿ ನಿಗಾ ವಹಿಸಿ ಶ್ರಮಿಸಿದ ಪರಿಣಾಮ ಮೇಳವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ರುಚಿ, ಸಂಭ್ರಮ ಮತ್ತು ಸಮುದಾಯದ ಒಗ್ಗಟ್ಟನ್ನು ಒಟ್ಟುಗೂಡಿಸಿದ ಈ ಆಹಾರ ಮೇಳವು ಹುಳಿಯಾರಿನ ಹೊಸ ವರ್ಷದ ಆಚರಣೆಗೆ ವಿಶೇಷ ಮೆರಗು ನೀಡಿತು.

## ವಿದ್ಯಾರ್ಥಿಗಳು ಶ್ರದ್ಧೆಯಿಂದ ಅಧ್ಯಯನ ಮಾಡಿದಲ್ಲಿ ಯಶಸ್ಸು ಸಾಧ್ಯ. ಲೋಹಿತ್



ತುರುವೇಕೆರೆ, ವಿದ್ಯಾರ್ಥಿಗಳು ಬಹಳ ಶ್ರದ್ಧೆಯಿಂದ ಅಧ್ಯಯನ ಮಾಡಿದಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಸಿಪಿಐ ಲೋಹಿತ್ ಹೇಳಿದರು.

ಪಟ್ಟಣದ ಜೆಪಿ ಕಾನ್ವೆಂಟ್ ಮತ್ತು ಜೆಪಿ ಆಂಗ್ಲ ಪ್ರೌಢಶಾಲೆಯ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಮಹತ್ವದ ಘಟ್ಟ. ಈ ಸಂದರ್ಭದಲ್ಲಿ ವಿದ್ಯಾಭ್ಯಾಸವನ್ನೇ ಗುರಿಯಾಗಿಸಿಕೊಂಡು ಏಕಾಗ್ರತೆಯಿಂದ ಓದಿದಲ್ಲಿ ಮುಂದಿನ ಹಂತ ಎಂದಿಗೂ ಕಠಿಣ ಎನಿಸದು ಎಂದರು. ಪೋಷಕರೂ ತಮ್ಮ ಮಕ್ಕಳ ಭವಿಷ್ಯ ಕಟ್ಟಿಕೊಳ್ಳಲು ಮೈಯೆಲ್ಲಾ ಕಣ್ಣಾಗಿರಿಸಿಕೊಂಡಿರಬೇಕು. ಮಕ್ಕಳಿಗೆ ಟಿವಿ ಮತ್ತು ಮೊಬೈಲ್ ನ ಗೀಳು ಬಾರದಂತೆ ನೋಡಿಕೊಳ್ಳಬೇಕೆಂದು ಸಿಪಿಐ ಲೋಹಿತ್ ಪೋಷಕರಿಗೆ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಶೈಕ್ಷಣಿಕ ಆಡಳಿತ ಅಧಿಕಾರಿಗಳಾದ ಡಿ.ಎಚ್ ಲಕ್ಷ್ಮಣಯ್ಯ ಹಾಗೂ ಮುಖ್ಯ ಶಿಕ್ಷಕ ಹೆಚ್. ಆರ್. ತುಕಾರಾಮ್ ರವರನ್ನು ಎಸ್ ಎಸ್ ಎಲ್ ಸಿ ಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ 33 ವಿದ್ಯಾರ್ಥಿಗಳನ್ನು ಹಾಗೂ ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳಾದ ಜೆ.ಪಿ. ಸಂದೀಪ್, ಡಾ ಸಹನಾ, ಶುಭ ಮಂಜುನಾಥ್, ಬಿ.ಎಸ್. ವೇದಶ್ರೀ ಹಾಗೂ ಎಚ್. ಎಸ್. ಮೇಘಶ್ರೀ ರವರನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಪ್ರಕಾಶ್ ಗುಪ್ತಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಜಿ. ಆರ್.ರಂಗೇಗೌಡ ಪ್ರಾಸ್ತಾವಿಕ ನುಡಿಗಳನ್ನು ಆಡಿದರು ಮುಖ್ಯ ಅತಿಥಿಗಳಾಗಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಶ್ರೀನಾಥ್ ಬಾಬು, ಸಂಸ್ಥೆಯ ಖಜಾಂಚಿ ಕೆ. ಟಿ. ಶಿವಣ್ಣ, ಸಹ ಕಾರ್ಯದರ್ಶಿ ಟಿ. ಎಸ್. ಲಕ್ಷ್ಮೀನರಸಿಂಹ, ಆಡಳಿತ ಅಧಿಕಾರಿ ನಜೀರ್ ಅಹ್ಮದ್ ಕಾರ್ಯಕಾರಿ ಮಂಡಳಿಯ ನಿರ್ದೇಶಕರಾದ ಟಿ ಎ ವಿ ಗುಪ್ತ, ಜಯಮ್ಮ ಶಿವಶೇಖರೇಗೌಡ ಹಾಗೂ ಗೆಳೆಯರ ಬಳಗದ ಸರ್ವ ಸದಸ್ಯರು ಹಾಜರಿದ್ದರು. ಮುಖ್ಯಶಿಕ್ಷಕ ಎಚ್.ಆರ್ ತುಕಾರಾಮ್ ಸ್ವಾಗತಿಸಿದರು. ಹೆಚ್ ಬಿ ಪ್ರಕಾಶ್ ನಿರೂಪಿಸಿದರು. ಓಂಕಾರ್ ಮೂರ್ತಿ ವಂದಿಸಿದರು ತುರುವೇಕೆರೆಯ ಜೆಪಿ ಆಂಗ್ಲಶಾಲೆಯ ವಾರ್ಷಿಕೋತ್ಸವವನ್ನು ಸಿಪಿಐ ಲೋಹಿತ್ ಉದ್ಘಾಟಿಸಿದರು.

# ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು,ಸಾವಿತ್ರಿಬಾಯಿ ಫುಲೆ ಜನ್ಮ ದಿನಾಚರಣೆಯಲ್ಲಿ



ತುಮಕೂರು:ಮಹಿಳೆಯರು ಶಿಕ್ಷಣದ ಜೊತೆಗೆ, ಅರ್ಥಿಕ ಸ್ವಾವಲಂಬನೆ ಬೆಳೆಸಿಕೊಳ್ಳಬೇಕು.ಪದವಿ,ಸ್ನಾತಕೋತ್ತರ ಪದವಿ ನಂತರ ಮನೆಯಲ್ಲಿಯೇ ಕುಳಿತುಕೊಳ್ಳದೆ ತನ್ನ ಅರ್ಹತೆಗೆ ತಕ್ಕಂತೆ ಉದ್ಯೋಗ ಪಡೆದು ಸ್ವಾವಲಂಬಿ ಜೀವನ ನಡೆಸುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ.ನೂರುನ್ನಿಸಾ ಸಲಹೆ ನೀಡಿದ್ದಾರೆ.

ನಗರದ ಜಿಲ್ಲಾಸ್ಪತ್ರೆಯ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಪರಿವರ್ತನವಾದ ತುಮಕೂರು ಜಿಲ್ಲಾ ಸಮಿತಿಯಿಂದ ಆಯೋಜಿಸಿದ್ದ ಅಕ್ಷರಮಾತೆ ಸಾವಿತ್ರಿ ಬಾಯಿ ಫುಲೆ ಜನ್ಮ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಭಾರತದ ಮಹಿಳಾ ಶಿಕ್ಷಣ ಕ್ಷೇತ್ರಕ್ಕೆ ಸಾವಿತ್ರಿ ಬಾಯಿ ಫುಲೆ ಅವರ ಕೊಡುಗೆಗಳು ಎಂಬ ವಿಚಾರ ಸಂಕಿರಣವನ್ನು ಅಂಬೇಡ್ಕರ್ ಮತ್ತು ಸಾವಿತ್ರಿ ಬಾಯಿ ಫುಲೆ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡುತಿದ್ದ ಅವರು,ಶೈಕ್ಷಣಿಕ ಆರ್ಹತೆಗೆ ತಕ್ಕ ಉದ್ಯೋಗ ಪಡೆದರೆ, ಇನ್ನೊಬ್ಬರ ಮೇಲೆ ಅವಲಂಭನೆಯಾಗುವುದು ತಪ್ಪುತ್ತದೆ.ಸ್ವಾವಲಂಬಿ ಬದುಕು ಸಾಧ್ಯ ಎಂದರು.

ಭಾರತದ ಮಹಿಳಾ ಸಾಕ್ಷರತೆಯ ಹಿಂದೆ ಸಾವಿತ್ರಿ ಬಾಯಿ ಫುಲೆ ಅವರ ಜೊತೆಗೆ, ಅವರ ಪತಿ ಜ್ಯೋತಿ ಬಾ ಫುಲೆ ಅವರ ಶ್ರಮವೂ ಇದೆ. ಮಹಿಳೆಯರು ಅಕ್ಷರ ಕಲಿಯುವುದೇ ನಿಷಿದ್ಧ ಎಂಬ ವಾತಾವರಣ ಇದ್ದರೂ,ತಮ್ಮ ಪತ್ನಿಗೆ ಸ್ವತಹಃ ಅಕ್ಷರಾಭ್ಯಾಸ ಮಾಡಿಸಿ,ಅವರನ್ನು ಶಿಕ್ಷಕಿಯಾಗಿ ರೂಪಿಸಿ,ಪತ್ನಿಯ ಪ್ರತಿ ಕೆಲಸಕ್ಕೂ ಬೆನ್ನೆಲುಬಾಗಿ ನಿಂತವರು ಜ್ಯೋತಿ ಬಾ ಫುಲೆ.ಅವರ ಅಂದು ಪಟ್ಟ ಶ್ರಮ ಸಾರ್ಥಕವಾಗಬೇಕೆಂದರೆ ಇಂದು ಪ್ರತಿ ಹೆಣ್ಣು ಮಗುವು ಶಿಕ್ಷಣದಿಂದ ವಂಚಿತರಾಗದಂತೆ ನಾವುಗಳು ನೋಡಿಕೊಳ್ಳಬೇಕಾಗಿದೆ.ತಾಯಿಯಾಗಿ, ಪತ್ನಿಯಾಗಿ ಸಂಸಾರದ ಬಾರ ಹೊರುವ ಹೆಣ್ಣು ಮಗಳು,ಪುರುಷರಗಿಂತ ದಕ್ಷತೆಯಿಂದ ಕಾರ್ಯನಿರ್ವಹಿಸಬಲ್ಲಳ್ಳು ಎಂಬುದನ್ನು ಸಾಧಿಸಿ ತೋರಿಸಿದ್ದಾಳೆ ಎಂದು ನ್ಯಾ.ನೂರುನ್ನಿಸಾ ತಿಳಿಸಿದರು.

ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಮಕ್ಕಳಿಗೆ ಕಲಿಸಬೇಕಾಗಿದೆ.ಹಿಂದೆ ಶಿಕ್ಷೆಯ ಭಯದಿಂದಾದರೂ ಮಕ್ಕಳು ತಪ್ಪು ಮಾಡಲು ಹಿಂಜರಿಯುತಿದ್ದರು.ಈಗ ಶಿಕ್ಷಕರ,ಪೋಷಕರ ಭಯ ಇಲ್ಲದೆ, ತಪ್ಪು ದಾರಿಯತ್ತ ಯುವಜನತೆ ಸಾಗುತ್ತಿದೆ.ಡ್ರಗ್ಸ್ ಎಂಬುದು ನಗರಕ್ಕಷ್ಟೇ ಸಿಮೀತಗೊಳ್ಳದೆ ಪ್ರತಿ ಹಳ್ಳಿಯನ್ನು ತಲುಪಿದೆ.ಬಾಹ್ಯ ಅಕರ್ಷಣೆಗಳಿಗೆ ಒಳಗಾಗಿ ಮಕ್ಕಳು ಹಾದಿ ತಪ್ಪುತಿದ್ದಾರೆ.ಸುಶಿಕ್ಷಿತರ ಸಂಖ್ಯೆ ಹೆಚ್ಚಿದರೆ ಸಾಲದು, ಗುಣಾತ್ಮಕ ಸುಶಿಕ್ಷಿತ ಸಮೂಹ ಹೆಚ್ಚಾಗಬೇಕು.ಆಗ ಮಾತ್ರ ಇಂತಹ ದುಶ್ಚಟಗಳಿಂದ ಯುವಜನತೆ ದೂರವಾಗಲು ಸಾಧ್ಯ ಎಂದು ನ್ಯಾ.ನೂರುನ್ನಿಸಾ ನುಡಿದರು.

ಭಾರತದ ಮಹಿಳಾ ಶಿಕ್ಷಣ ಕ್ಷೇತ್ರಕ್ಕೆ ಸಾವಿತ್ರಿ ಬಾಯಿ ಫುಲೆ ಅವರ ಕೊಡುಗೆಗಳು ಎಂಬ ವಿಚಾರ ಕುರಿತು ಮಾತನಾಡಿದ ತುಮಕೂರು ವಿವಿ ಇಂಗ್ಲಿಷ್ ವಿಷಯದ ಪ್ರಾಧ್ಯಾಪಕಿ ಡಾ.ಜ್ಯೋತಿ,ಮಹಿಳೆಯರು, ದಲಿತರು ಅಕ್ಷರ ಕಲಿತರೆ ಸಾಮಾಜಿಕ ಬಹಿಷ್ಕಾರದಂತಹ ಶಿಕ್ಷೆಗೆ ಗುರಿಪಡಿಸುತ್ತಿದ್ದ ಕಾಲದಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆ ತೆರೆದು,ಸತ್ಯ ಶೋಧನಾ ಸಮಾಜ ಸಂಘಟನೆಯ ಮೂಲಕ ವರದಕ್ಷಿಣೆ ವಿರೋಧ ವೇದಿಕೆ, ಕಾರ್ಮಿಕರಿಗಾಗಿ ರಾತ್ರಿ ಶಾಲೆ,ಸರಳ ವಿವಾಹ,ಮಹಿಳಾ ಸೇವಾ ಮಂಡಳಿ,ಬಾಲ್ಯ ವಿವಾಹ, ಭ್ರೂಣ ಹತ್ಯೆ, ಶಿಶುವಿಹಾರ,ಸಾಮೂಹಿಕ ಬೋಜನದಂತಹ ಕ್ರಾಂತಿಕಾರಿ ಹೆಜ್ಜೆಗಳನಿಟ್ಟರು.ಹೆಣ್ಣು ಮಕ್ಕಳಿಗೆ ಶಾಲೆ ತೆರೆದರೆಂಬ ಕಾರಣಕ್ಕೆ ಮನೆಯಿಂದ ಹೊರ ಹಾಕಲ್ಪಟ್ಟಾಗ,ಆಶ್ರಯ ನೀಡಿದ ಷೇಕ್ ಉಸ್ಮಾನ್ ಅವರ ಪುತ್ರಿ ಫಾತಿಮಾ ಬೇಗಂ ಅವರನ್ನು ಶಿಕ್ಷಕಿಯಾಗಿಸಿ,ಹೊಸ ಇತಿಹಾಸ ಬರೆದರು.ಬ್ರಿಟಿಷ್ ಸರಕಾರವೇ ಅವರಿಗೆ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಿತು.ಮಹರಾಷ್ಟ ಸರಕಾರ ಜನವರಿ 03 ನ್ನು ಮಹಿಳಾ ದಿನವಾಗಿ ಆಚರಿಸುತ್ತಿದೆ. ಇಡೀ ಭಾರತವೇ ಈ ದಿನವನ್ನು ಮಹಿಳಾ ದಿನವನ್ನಾಗಿ ಆಚರಿಸುವಂತಾಗಬೇಕು ಎಂದರು.

ಆರ್.ಎಂ.ಓ ಡಾ.ಅಶೋಕ್ ಟಿ.ಬಿ. ಮಾತನಾಡಿ,ಮಹಿಳಾ ಶಿಕ್ಷಣ ಕ್ಷೇತ್ರದಲ್ಲಿ ಸಾವಿತ್ರಿಬಾ ಫುಲೆ ಅವರದ್ದು ಮರೆಯಲಾಗದ ಸಾಧನೆ.ಶಿಕ್ಷಣದ ಜೊತೆಗೆ, ಮೌಲ್ಯಯುವ ಶಿಕ್ಷಣ ಇಂದಿನ ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಾರ್ತಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಹಿಮಂತರಾಜು ವಹಿಸಿದ್ದರು. ವೇದಿಕೆಯಲ್ಲಿ ದಸಂಸ ಪರಿವರ್ತನವಾದದ ರಾಜ್ಯ ಪ್ರಧಾನ ಸಂಚಾಲಕ ಗೋವಿಂದರಾಜ್.ಎಂ., ಪಿ.ಎನ್.ರಾಮಯ್ಯ, ಡಾ.ಲಕ್ಷ್ಮಿರಂಗಯ್ಯ,ಹೆಗ್ಗೆರೆ ಕೃಷ್ಣಪ್ಪ, ಯಲ್ಲಯ್ಯ ಸಿದ್ದಾಪುರ, ನಳಿನಮ್ಮ ಸಿಂಗನಳ್ಳಿ, ಛಲವಾದಿ ಶೇಖರ್, ವಿಜಯಲಕ್ಷ್ಮಿ, ಭಾಗ್ಯ, ಸಿದ್ದಲಿಂಗಯ್ಯ ಗೌಡಿಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ಚಳಿಗಾಲದಲ್ಲಿ ಬೆಂಕಿ ಕಾಯಿಸುವಾಗ ಈ ತಪ್ಪನ್ನು ಮಾಡಲೇಬೇಡಿ!



ದೇಶದ ಹಲವು ರಾಜ್ಯಗಳಲ್ಲಿ ಪ್ರಸ್ತುತ ತೀವ್ರ ಚಳಿ ಇದೆ. ಬೆಚ್ಚಗಿರಲು ಜನರು ಬೆಂಕಿ ಮುಂದೆ ಕುಳಿತುಕೊಳ್ಳಲು ಇಷ್ಟಪಡುತ್ತಾರೆ, ಆದರೆ ಇದನ್ನು ಬಳಸುವಾಗ ಕೆಲವು ಮುನ್ನೆಚ್ಚರಿಕೆ ವಹಿಸದಿದ್ದಲ್ಲಿ ಪ್ರಯೋಜನಕ್ಕಿಂತ ಇದರಿಂದ ಉಂಟಾಗುವ ಅಪಾಯವೇ ಹೆಚ್ಚಾಗಬಹುದು. ಹೌದು, ಈ ಬಗ್ಗೆ ಡಾ. ಸುಭಾಷ್ ಗಿರಿ ಅವರು ಕೆಲವು ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ಹಾಗಾಗಿ ತೀವ್ರ ಚಳಿಯಿಂದ ಮುಕ್ತಿ ಪಡೆಯಲು ಅಗ್ಗಿಷ್ಟಿಕೆ ಅಥವಾ ಅಂಗೀತಿಯ ಬಳಕೆ ಮಾಡುವ ಮೊದಲು ಅಥವಾ ಸೌದೆ ಒಲೆಗಳನ್ನು ಬಳಸುವ ಮೊದಲು ಈ ವಿಷಯಗಳನ್ನು ತಿಳಿದುಕೊಳ್ಳಿ.

ಪ್ರಸ್ತುತ, ಕರ್ನಾಟಕ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ತೀವ್ರ ಚಳಿ ಇದ್ದು ಈ ವಾತಾವರಣದಲ್ಲಿ ದೇಹವನ್ನು ರಕ್ಷಿಸಿಕೊಳ್ಳಲು, ಜನರು ವಿವಿಧ ರೀತಿಯ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಸಹಜ. ಅವುಗಳಲ್ಲಿ ಬೆಂಕಿ ಕಾಯಿಸುವುದು ಕೂಡ ಒಂದು. ಇದು ಹಳ್ಳಿ ಅಥವಾ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸಣ್ಣ ಸಣ್ಣ ಮನೆಗಳಲ್ಲಿ, ಜನರು ಬೆಚ್ಚಗಿರಲು ಜೊತೆಗೆ ತೀವ್ರ ಚಳಿಯಿಂದ ಮುಕ್ತಿ ಪಡೆಯಲು ಅಗ್ಗಿಷ್ಟಿಕೆ ಅಥವಾ ಅಂಗೀತಿಯ ಬಳಕೆ ಮಾಡುತ್ತಾರೆ. ಆದರೆ ಶೀತದಿಂದ ಬೆಚ್ಚಗಿರಲು ಬಳಸುವ ಅಗ್ಗಿಷ್ಟಿಕೆ ಅಥವಾ ಮನೆಗಳಲ್ಲಿ ಸೌದೆ ಒಲೆಗಳನ್ನು ಸರಿಯಾಗಿ ಬಳಸದಿದ್ದರೆ ಆರೋಗ್ಯಕ್ಕೆ ಹಾನಿಯಾಗಬಹುದು. ಹೌದು ಇತ್ತೀಚಿನ ದಿನಗಳಲ್ಲಿ ಮನೆಯೊಳಗೆ ಬೆಂಕಿ ಒಟ್ಟಿಕೊಳ್ಳುವ ಸೌಲಭ್ಯ ಕಲ್ಪಿಸಿಕೊಂಡಿದ್ದು, ಮುಚ್ಚಿದ ಕೋಣೆಯಲ್ಲಿ ಉರಿಯುವ ಬೆಂಕಿಯ ಮುಂದೆ ಘಂಟೆಗಟ್ಟಲೆ ಕುಳಿತುಕೊಳ್ಳುತ್ತಾರೆ. ಆದರೆ ಅದಕ್ಕೂ ಮೊದಲು ಈ ಅಭ್ಯಾಸದಿಂದ ಎಷ್ಟೆಲ್ಲಾ ಅಪಾಯವಿದೆ, ಬಳಸುವಾಗ ಯಾವ ರೀತಿ ಮುನ್ನೆಚ್ಚರಿಕೆ ವಹಿಸಬೇಕು ಎಂಬುದನ್ನು ತಿಳಿದುಕೊಂಡಿರಬೇಕಾಗುತ್ತದೆ. ಅಗ್ಗಿಷ್ಟಿಕೆ ಅಥವಾ ಒಲೆಗಳಲ್ಲಿ ಸೌದೆ ಹಾಕಿ ಬೆಂಕಿ ಕಾಯಿಸುವುದರಿಂದ



ಉಸಿರಾಟದ ತೊಂದರೆಗಳು, ಪ್ರಜ್ಞಾಹೀನತೆ ಮತ್ತು ತೀವ್ರತರವಾದ ಪ್ರಕರಣಗಳಲ್ಲಿ ಸಾವಿಗೂ ಕಾರಣವಾಗಬಹುದು. ಇದು ಕೇಳುವುದಕ್ಕೆ ಬಹಳ ಆಶ್ಚರ್ಯ ಉಂಟುಮಾಡಬಹುದು ಆದರೆ ಇದು ಸತ್ಯ. ಆರ್‌ಎಂಎಲ್ ಆಸ್ಪತ್ರೆಯ ವೈದ್ಯಕೀಯ ವಿಭಾಗದ ನಿರ್ದೇಶಕರಾದ ಪ್ರೊಫೆಸರ್ ಡಾ. ಸುಭಾಷ್ ಗಿರಿ ಹೇಳುವ ಪ್ರಕಾರ, ಬ್ರೇಜಿಯರ್ ಅಥವಾ ಅಗ್ಗಿಷ್ಟಿಕೆಯನ್ನು ಯಾವಾಗಲೂ ಎಚ್ಚರಿಕೆಯಿಂದ ಬಳಸಬೇಕು. ಅದನ್ನು ಅಂಗಳ, ಮೇಲ್ಛಾವಣಿ ಅಥವಾ ಸಾಕಷ್ಟು ಗಾಳಿ ಇರುವ ಸ್ಥಳದಂತಹ ತೆರೆದ ಪ್ರದೇಶದಲ್ಲಿ ಇಡಬೇಕು. ಒಳಾಂಗಣದಲ್ಲಿ ಬ್ರೇಜಿಯರ್ ಇಟ್ಟುಕೊಳ್ಳುವುದು ಒಳ್ಳೆಯದಲ್ಲ. ಅಷ್ಟು ಅಗತ್ಯವಿದ್ದರೆ, ಹೊಗೆ ಹೊರಬರಲು ಕಿಟಕಿ ಅಥವಾ ಬಾಗಿಲನ್ನು ಸ್ವಲ್ಪ ತೆರೆದಿಡಿ ಎಂದು ಅವರು ಹೇಳುತ್ತಾರೆ.

ಈ ತಪ್ಪನ್ನು ಮಾಡಬೇಡಿ;

ಮುಚ್ಚಿದ ಕೋಣೆಯಲ್ಲಿ ಒಲೆ ಇಟ್ಟು ಬೆಂಕಿ ಹಾಕುವುದರಿಂದ ಇಂಗಾಲದ ಮಾನಾಕ್ಸೈಡ್ ಉತ್ಪತ್ತಿಯಾಗುತ್ತದೆ. ಈ ಅನಿಲಕ್ಕೆ ಒಡ್ಡಿಕೊಳ್ಳುವುದರಿಂದ ತಲೆತಿರುಗುವಿಕೆ, ತಲೆನೋವು, ವಾಂತಿ ಮತ್ತು ಉಸಿರಾಟದ ತೊಂದರೆ ಉಂಟಾಗುತ್ತದೆ. ದೀರ್ಘಕಾಲದವರೆಗೆ ಒಡ್ಡಿಕೊಳ್ಳುವುದರಿಂದ ಪ್ರಜ್ಞಾಹೀನತೆ ಉಂಟಾಗುತ್ತದೆ ಮತ್ತು ಜೀವಕ್ಕೆ ಅಪಾಯವೂ ಉಂಟಾಗುತ್ತದೆ. ಜನರು ಬೆಚ್ಚಗಿರಲು ಮತ್ತು ರಾತ್ರಿ ನಿದ್ರೆ ಚೆನ್ನಾಗಿ ಬರಲು ಮಲಗುವ ಕೋಣೆಯ ಬಳಿ ಸಣ್ಣದಾಗಿ ಬೆಂಕಿ ಉರಿಯಲು ಬಿಟ್ಟಿಡುತ್ತಾರೆ ಆದರೆ ಇದು ಬಹಳ ಅಪಾಯಕಾರಿ ಎಂದು ಆರೋಗ್ಯ ತಜ್ಞರು ಹೇಳುತ್ತಾರೆ.

# ಗೌತಮ ಬುದ್ಧನ ಜೀವನ ಮತ್ತು ಬೋಧನೆಗಳನ್ನು ಸ್ಮರಿಸಲು ನಿರ್ಮಿಸಲಾದ ಅಮರಾವತಿ ಸ್ತೂಪ

ಸೂರ್ಯಪ್ರಗತಿ ನ್ಯೂಸ್. ಕಾಂ







ಅಮರಾವತಿ ಮಹಾಚೈತ್ಯ ಎಂದೂ ಕರೆಯಲ್ಪಡುವ ಅಮರಾವತಿ ಸ್ತೂಪವು ವೃತ್ತಾಕಾರದ ದಿಬ್ಬದಂತಹ ರಚನೆಯಾಗಿದ್ದು, ಬೌದ್ಧಧರ್ಮದ ಸ್ಥಾಪಕ ಗೌತಮ ಬುದ್ಧನ ಜೀವನ ಮತ್ತು ಬೋಧನೆಗಳನ್ನು ಸ್ಮರಿಸಲು ಇದನ್ನು ನಿರ್ಮಿಸಲಾಗಿದೆ. ಈ ಸ್ತೂಪವು ಬೌದ್ಧರಿಗೆ ಅತ್ಯಂತ ಪವಿತ್ರ ಮತ್ತು ಪ್ರಮುಖ ಸ್ಥಳಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಈ ಸ್ತೂಪವನ್ನು ಮೂಲತಃ ಕ್ರಿ.ಪೂ. 268 ರಿಂದ 232 ರವರೆಗೆ ಭಾರತದ ಬಹುಭಾಗವನ್ನು ಆಳಿದ ಚಕ್ರವರ್ತಿ ಅಶೋಕನ ಆಳ್ವಿಕೆಯಲ್ಲಿ ಅಡಿಪಾಯ ಹಾಕಲಾಗಿ ನಂತರ ಅಧಿಕಾರಕ್ಕೆ ಬಂದ ಶಾತವಾಹನರು ಇದನ್ನು ಪೂರ್ಣಪ್ರಮಾಣದಲ್ಲಿ ಅಭಿವೃದ್ಧಿಪಡಿಸಿದರು ಮತ್ತು ಹೆಚ್ಚಿನ ಪ್ರಮಾಣದಲ್ಲಿ ಆಶ್ರಯ ನೀಡಿದರು ಆದರೆ ಕ್ರಿ ಪೂ 6 ನೇ ಶತಮಾನದ ನಂತರ ಭಾರತದಲ್ಲಿ ಬೌದ್ಧಧರ್ಮ ಕ್ಷೀಣಿಸಿ, ಆ ಪ್ರದೇಶವು ಆಕ್ರಮಣಗಳು ಮತ್ತು ಯುದ್ಧಗಳನ್ನು ಎದುರಿಸುತ್ತಿದ್ದಂತೆ ಸ್ತೂಪವು ಅವನತಿ ಹೊಂದಿತು ಮತ್ತು ಸ್ತೂಪವನ್ನು ನಿರ್ಲಕ್ಷಿಸಲಾಯಿತು, ಮತ್ತು ಅದರ ಶಿಲ್ಪಗಳು ಮತ್ತು ಅವಶೇಷಗಳನ್ನು ಲೂಟಿ ಮಾಡಲಾಯಿತುನಂತರ 18 ನೇ ಶತಮಾನದಲ್ಲಿ ಬ್ರಿಟಿಷ್ ಸರ್ವೇಯರ್ ಮತ್ತು ಪರಿಶೋಧಕ ಕರ್ನಲ್ ಕಾಲಿನ್ ಮೆಕೆಂಜಿ ಅವರು ಸ್ತೂಪವನ್ನು ಮರುಶೋಧಿಸಿದರು, ಅವರು ಈ ಪ್ರದೇಶದ ಸಮೀಕ್ಷೆಯನ್ನು ನಡೆಸುವಾಗ ಸ್ತೂಪದ ಅವಶೇಷಗಳನ್ನು ಕಂಡರು. ಅವರು ಈ ಸ್ಥಳವನ್ನು ಉತ್ಖನನ ಮಾಡಿ ಸ್ತೂಪದಿಂದ ಅನೇಕ ಶಿಲ್ಪಗಳು ಮತ್ತು ಶಾಸನಗಳನ್ನು ಸಂಗ್ರಹಿಸಿದರು, ಅದನ್ನು ಅವರು ಮದ್ರಾಸ್ ವಸ್ತುಸಂಗ್ರಹಾಲಯ ಮತ್ತು ಬ್ರಿಟಿಷ್ ವಸ್ತುಸಂಗ್ರಹಾಲಯಕ್ಕೆ ಕಳುಹಿಸಿದರು. ನಂತರ, ಇತರ ಪುರಾತತ್ವಜ್ಞರು ಮತ್ತು ಇತಿಹಾಸಕಾರರು ಸಹ ಸ್ತೂಪದ ಮೇಲೆ ಉತ್ಖನನ ಮತ್ತು ಸಂಶೋಧನೆಗಳನ್ನು ನಡೆಸಿದರು ಮತ್ತು ಅದರ ಇತಿಹಾಸ ಮತ್ತು ಮಹತ್ವವನ್ನು ಜಗತ್ತಿಗೆ ಬಹಿರಂಗಪಡಿಸಿದರು. ಸ್ತೂಪವನ್ನು ಭಾರತದ ಪುರಾತತ್ವ ಸಮೀಕ್ಷೆಯು ಸಂರಕ್ಷಿತ ಸ್ಮಾರಕವೆಂದು ಘೋಷಿಸಿತು, ಇದು ಸ್ತೂಪದ ಸಂರಕ್ಷಣೆ ಮತ್ತು ಪುನಃಸ್ಥಾಪನೆಯನ್ನು ಕೈಗೆತ್ತಿಕೊಂಡಿತು. ಈ ಸ್ತೂಪವು ಈಗ ಭಾರತ ಮತ್ತು ಬೌದ್ಧಧರ್ಮದ ವೈಭವದ ಭೂತಕಾಲವನ್ನು ಪ್ರದರ್ಶಿಸುವ ರಾಷ್ಟ್ರೀಯ ಪರಂಪರೆಯ ತಾಣ ಎಂದು ಘೋಷಿಸಿದೆ. 2015 ರಲ್ಲಿ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಹೊಸ ರಾಜಧಾನಿಯಾಗಿ ಅಮರಾವತಿಯನ್ನು ಘೋಷಿಸಿದರು, ಇದು ಐತಿಹಾಸಿಕ ಬೌದ್ಧ ತಾಣದಿಂದ ಪ್ರೇರಿತವಾಗಿದ್ದು , ಸಿಂಗಾಪುರದಂತೆಯೇ ಆಧುನಿಕ ನಗರವಾಗಿ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ.

ಅಮರಾವತಿ ಮತ್ತು ಬೌದ್ಧಧರ್ಮ: .

ಐದನೇ ಶತಮಾನದಲ್ಲಿ ಪ್ರಾಚೀನ ಮಗಧ ರಾಜ್ಯದಲ್ಲಿ (ಇಂದಿನ ಬಿಹಾರ) ಹೊರಹೊಮ್ಮಿದ ಬೌದ್ಧಧರ್ಮವು ಆಂಧ್ರಪ್ರದೇಶಕ್ಕೆ ವಿಸ್ತರಿಸಿತು. ಆಂಧ್ರಪ್ರದೇಶದಲ್ಲಿ ಬೌದ್ಧಧರ್ಮದ ಮೊದಲ ಮಹತ್ವದ ಪುರಾವೆಗಳು ಕ್ರಿ.ಪೂ 3 ನೇ ಶತಮಾನಕ್ಕೆ ಹಿಂದಿನವು, ಅಶೋಕ ಚಕ್ರವರ್ತಿ ಈ ಪ್ರದೇಶದಲ್ಲಿ ಒಂದು ಶಾಸನವನ್ನು ಸ್ಥಾಪಿಸಿದಾಗ, ಅದು ಅಮರಾವತಿಯವರೆಗೆ ವಿಸ್ತರಣೆ ಆಯಿತು. ಕ್ರಿ.ಪೂ 483 ರಲ್ಲಿ ಬಿಹಾರದ ರಾಜಗೀರ್‌ನಲ್ಲಿ ನಡೆದ ಮೊದಲ ಬೌದ್ಧ ಪರಿಷತ್ತಿನಲ್ಲಿ ಆಂಧ್ರದ ಸನ್ಯಾಸಿಗಳು ಉಪಸ್ಥಿತರಿದ್ದರು . 3 ನೇ ಶತಮಾನದವರೆಗೆ ಸುಮಾರು ಆರು ಶತಮಾನಗಳ ಕಾಲ ಬೌದ್ಧಧರ್ಮ ಈ ಪ್ರದೇಶದಲ್ಲಿ ಪ್ರವರ್ಧಮಾನಕ್ಕೆ ಬಂದಿತು , ಅಮರಾವತಿ, ನಾಗಾರ್ಜುನಕೊಂಡ, ಜಗ್ಗಯಪೇಟೆ, ಸಾಲಿಹುಂಡಂ ಮತ್ತು ಶಂಕರಂನಂತಹ ಪ್ರತ್ಯೇಕ ಸ್ಥಳಗಳು 14 ನೇ ಶತಮಾನದವರೆಗೆ ಧರ್ಮವನ್ನು ಆಚರಿಸುವುದನ್ನು ಮುಂದುವರೆಸಿದವು

ಬೌದ್ಧ ಧರ್ಮದಲ್ಲಿ ಅಮರಾವತಿಯ ಮಹತ್ವ: .

ಅಮರಾವತಿಯು ಮಹಾಯಾನ ಬೌದ್ಧಧರ್ಮದ ಜನ್ಮಸ್ಥಳವೆಂದು ಹೆಸರುವಾಸಿಯಾಗಿದೆ , ಇದು ಬೋಧಿಸತ್ವ ಮಾರ್ಗವನ್ನು ಒತ್ತಿಹೇಳುವ ಬೌದ್ಧಧರ್ಮದ ಪ್ರಮುಖ ಶಾಖೆಗಳಲ್ಲಿ ಒಂದಾಗಿದೆ . ಪ್ರಮುಖ ಬೌದ್ಧ ತತ್ವಜ್ಞಾನಿ ಆಚಾರ್ಯ ನಾಗಾರ್ಜುನರು ಅಮರಾವತಿಯಲ್ಲಿ ವಾಸಿಸುತ್ತಿದ್ದರು ಮತ್ತು ಶೂನ್ಯತೆ ಮತ್ತು ಮಧ್ಯಮ ಮಾರ್ಗದ ಪರಿಕಲ್ಪನೆಯ ಮೇಲೆ ಕೇಂದ್ರೀಕರಿಸುವ ಮಧ್ಯಮಿಕ ತತ್ವಶಾಸ್ತ್ರವನ್ನು ಅಭಿವೃದ್ಧಿಪಡಿಸಿದರು . ಅಮರಾವತಿಯಿಂದ, ಮಹಾಯಾನ ಬೌದ್ಧಧರ್ಮವು ದಕ್ಷಿಣ ಏಷ್ಯಾ, ಚೀನಾ,ಜಪಾನ್,ಕೊರಿಯಾಮತ್ತುಆಗ್ನೇಯಏಷ್ಯಾದಾದ್ಯಂತಹರಡಿತು.

ಲಕ್ಷ್ಮೀ ಕಾಂತ್ ಜೆ ಸಿ

# ಯುವ ಜನತೆಯ ನಾಳೆಗಳು... ಯಾರಿಗಿದೆ ಹೊಣೆಗಾರಿಕೆ..?



ಓದುಗರು ಬೇರೆಯವರ ಅನುಭವ, ಅವರ ಬದುಕಲ್ಲಿ ನಡೆದ ಘಟನೆಗಳನ್ನು ಕಥೆ,ಲೇಖನ, ನಾಟಕ, ಕಾವ್ಯಗಳ ರೂಪದಲ್ಲಿ ಸಾಹಿತ್ಯಲೋಕಕ್ಕೆ ಕೊಡುಗೆ ಕೊಡಬೇಕೆಂದು ಬರೆಯುವ ಬದಲು ನಮ್ಮ ಗ್ರಾಮೀಣ ಯುವಕ ಯುವತಿಯರ ಬದುಕು ಮತ್ತು ತಾತ್ವಿಕ ಚಿಂತನೆಗಳು ಯಾವ ಕಡೆಗೆ ಸಾಗುತ್ತಿವೆ ಎಂದು ಆಲೋಚಿಸಬೇಕಾದ ಅನಿವಾರ್ಯತೆ ನಮಗಿದೆ.

ಮೂಲಭೂತವಾಗಿ ವೈದಿಕರು ತನ್ನ ಶ್ರೇಷ್ಠತೆಯ ಮೂಲಕ ಯಾವಾಗ ಶಿಕ್ಷಿತರಾಗಲು ಪ್ರಾರಂಭಿಸಿದರೋ ಅಂದಿನಿಂದ ಶಿಕ್ಷಣ ಕ್ರಮ ಪ್ರಾರಂಭವಾಯಿತು ಎಂದು ಹೇಳುತ್ತಾರೆ. ಶಿಕ್ಷಣ ಎನ್ನುವುದು ತಳ ಸಮುದಾಯಕ್ಕೆ ತಾನು ಕಲಿತ ಕೌಶಲ್ಯದ ಆಧಾರದ ಮೇಲೆ ತೀರ್ಮಾನವಾಗುತ್ತಿತ್ತು. ಆದರೆ ಮೂಲಭೂತವಾದಿಗಳ ಅದನ್ನು ತಿರಸ್ಕರಿಸುತ್ತಾ, ವೈದಿಕ ಶಿಕ್ಷಣವೇ ಮೂಲ ಶಿಕ್ಷಣವೆಂದು ಎಲ್ಲರಿಗೂ ನಂಬಿಸಲಾರಂಭಿಸಿದರು. ಅಂತಹ ಸಿದ್ಧಮಾದರಿಯ ನಿಲುವುಗಳನ್ನೇ ನಾವು ನಿಜವೆಂದು ತಿಳಿದು ಅವುಗಳ ಸುತ್ತಲು ಇಂದಿಗೂ ಸುತ್ತುತ್ತಲೇ ಇರುವುದು ವಿದ್ಯಾರ್ಥಿಗಳ ಇಂದಿನ ಶಿಕ್ಷಣ ಕ್ರಮಗಳಾಗಿವೆ. ಇದರಿಂದಾಗಿ ಭವಿಷತ್ತಿನ ಶಿಕ್ಷಣ ಮಾದರಿಯನ್ನು ಗುರುತಿಸುವುದು ಕಷ್ಟಕರವಾಗಿದೆ. ಇದರ ಮೂಲವೇ ನಾವುಗಳು ಸಿದ್ಧಪಠ್ಯಕ್ರಮದ ಹುಳುಗಳಾಗಿದ್ದು, ಅದರಲ್ಲಿ ನಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವುದು ಎಂದರೆ ತಪ್ಪಾಗಲಾರದು.

ಬಾಬಾಸಾಹೇಬ್ ಡಾ. ಅಂಬೇಡ್ಕರರು ಎಂದಿಗೂ ಸಿದ್ಧಮಾದರಿಯ ಪಠ್ಯಕ್ರಮವನ್ನಾಗಲಿ, ವೈದಿಕ ಪರಂಪರೆಯ ಶಿಕ್ಷಣ ಕ್ರಮವನ್ನಾಗಲಿ ನಿಜವೆಂದು ತಿಳಿದು ಸುಮ್ಮನೆ ಕುಳಿತವರಲ್ಲಾ. ಅದನ್ನು ಮೀರಿ ತಮ್ಮ ಆಲೋಚನೆಗಳಿಗೂ ನಿಲುಕದ ರೀತಿಯಲ್ಲಿ ತಮ್ಮನ್ನು ತಾವು ವಿಸ್ತರಿಸಿಕೊಳ್ಳುತ್ತಾ ಹೊಸ ಆಧುನಿಕ ಜಗತ್ತಿನ ಕಡೆಗೆ ಮುಖಮಾಡಿ ನಿಲ್ಲತೊಡಗಿದರು, ಮುಂದಿನ ನವಭಾರತದ ಆಧುನಿಕ ಶಿಕ್ಷಣ ಪ್ರಜ್ಞೆ ಎಂಬುದು ಎಲ್ಲರಿಗೂ ಭವಿಷತ್ತಿನಲ್ಲಿ ಭದ್ರಬುನಾದಿಯಾಗಬೇಕು. ಆಧುನಿಕ ಶಿಕ್ಷಣ ಕ್ರಮವು ಯುವಕರಿಗೆ ಜೀವನದ ಭದ್ರತೆಯಾಗಬೇಕೆಂದು ಮನಗಂಡಿದ್ದರು. ಬಾಬಾಸಾಹೇಬರೇ ಹೇಳುವಂತೆ ಸಿದ್ಧಮಾದರಿಯ ಪಠ್ಯಕ್ರಮದಲ್ಲಿನ ಇತಿಹಾಸದ ಪುಟಗಳು ಕೇವಲ ಮಹಿಳೆಯರು ಮತ್ತು ಮಕ್ಕಳನ್ನು ರಂಜಿಸುವ ಪುಟಗಳಾಗಿವೆಯೇ ಹೊರತು ಮತ್ತೇನು ಅಲ್ಲಾ, ನಾವುಗಳು ನಿಜವಾದ ಇತಿಹಾಸವನ್ನು ಅರಿಯಬೇಕಾದರೆ ಇತಿಹಾಸದ ಪುಟಗಳ ಪ್ರತೀ ಎರಡು ಸಾಲುಗಳ ಮದ್ಯದಲ್ಲಿ ಸತ್ಯತೆಯನ್ನು ಅಡಗಿಸಿಡಲಾಗಿದೆ. ಆ ಸತ್ಯತೆಯನ್ನು ತಿಳಿಯಬೇಕಾದರೆ ಗಾಢವಾದ ಅಧ್ಯಯನ ಬಹಳ ಮುಖ್ಯವಾದದ್ದು ಎಂದಿದ್ದಾರೆ.

ನಮ್ಮ ಇಂದಿನ ಯುವ ಮಿತ್ರರು ಅಧ್ಯಯನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹೊಸದೊಂದು ಇತಿಹಾಸವನ್ನು ಸೃಷ್ಟಿಸುವ ಸಾಹಸಕ್ಕೆ ಕೈ ಹಾಕಿ, ಸಿದ್ಧಮಾದರಿಯ ವೈದಿಕ (ಅವೈಜ್ಞಾನಿಕ) ಪರಂಪರೆಯ ಆಚರಣೆಗಳು ಮತ್ತು ಅಂದಿನ ಮೂಢನಂಬಿಕೆಯಿಂದ ಹೊರಬರಬೇಕಾಗಿದೆ. ಮಾನಸಿಕ ಪಕ್ವತೆಯ ಜೊತೆಗೆ ನಿರ್ದಿಷ್ಠ ವಿಚಾರಗಳಿಂದ ಹೊಸತನವನ್ನು ಕಟ್ಟಬೇಕಾದ ಅನಿವಾರ್ಯತೆ ಇಂದಿನ ಓದುಗರಲ್ಲಿರಬೇಕಾಗಿದೆ. ಬಾಬಾಸಾಹೇಬರು ಹೇಳಿದ್ದು ಇದನ್ನೇ ಇತಿಹಾಸವನ್ನು ಅರಿಯದವರು ಇತಿಹಾಸವನ್ನು ಸೃಷ್ಟಿಸಲಾರರು ಹೀಗೆ ಹೊಸ ಇತಿಹಾಸ ಸೃಷ್ಟಿಸುವಲ್ಲಿ ಆಧುನಿಕ ಜಗತ್ತಿಗೆ ಮುಖ ಮಾಡಿ ನಿಲ್ಲಬೇಕಾದ ಪರಿಸ್ಥಿತಿಯನ್ನು ನಮ್ಮ ಯುವಕರಲ್ಲಿ ಕಾಣಬೇಕಾಗಿದೆ.

ಆಧುನಿಕ ಶಿಕ್ಷಣ ಪದ್ದತಿಯು ಹೊಸ ತಲೆಮಾರಿನ ಯುವಕರನ್ನು ಸಿದ್ಧಮಾದರಿಯ ಶಿಕ್ಷಣ ವ್ಯವಸ್ಥೆಯೊಳಗಿನಿಂದ ಬಿಡುಗಡೆಗೊಳಿಸಿ ಹೊಸ ಬದುಕನ್ನು ಕಟ್ಟಿಕೊಡುತ್ತದೆ ಎನ್ನುವುದು ಕೇವಲ ಮಾನಸಿಕ ಭೂತವಾಗಿರುವು ನವ ತರುಣರ ಮತ್ತು ಪೋಷಕರ ಕಣ್ಣುಗಳಲ್ಲಿನ ಕನಸುಗಳಾಗಿವೆ. ಇವು ಗ್ರಾಮೀಣ ಜಗತ್ತಿನಿಂದ ನಗರದ ಬದುಕಿಗೆ ಜಿಗಿಯುವ ಜೀವನ ಶೈಲಿಯ ಪಲ್ಲಟಗಳಾಗಿದ್ದು, ಇಂದು ಶಿಕ್ಷಣವೂ ಸಹ ಹೊಸ ಮಾದರಿಯಾಗಿ ಪರಿವರ್ತನೆಗೊಂಡು ಸಿದ್ಧ ಮಾದರಿಯನ್ನೇ ಒಪ್ಪಿಕೊಳ್ಳುವ ಎಲ್ಲಾ ಹುನ್ನಾರಗಳೆನ್ನಬಹುದು. ಹಾಗೂ ವೈದಿಕ ವ್ಯವಸ್ಥೆಯು ಬಹುಸಂಖ್ಯಾತ ವಿದ್ಯಾರ್ಥಿಗಳ ಮೆದುಳಿಗೆ ಬಲವಂತವಾಗಿ ಏರುತ್ತಿರುವ ಕಟ್ಟಳೆಗಳು ಆಧುನಿಕತೆ ಮತ್ತು ವೈಜ್ಞಾನಿಕತೆಯ ಶಿಕ್ಷಣದ ಕುಂಠಿತಕ್ಕೆ ಕಾರಣವಾಗುತ್ತಿರುವುದು ಬಹಳ ನೋವಿನ ವಿಷಯವಾಗಿದೆ.

ಇಂದಿನ ಶಿಕ್ಷಣ ಕ್ಷೇತ್ರವೂ ಸಹ ಗ್ರಾಮೀಣ ಪ್ರದೇಶದ ಯುವಕ ಯುವತಿಯರಲ್ಲಿ ಆಧುನಿಕ ಆರ್ಥಿಕ ಸಾಧಿತವನ್ನು ನಿಯಂತ್ರಿಸುವ ಮಜಲುಗಳಾಗಿದ್ದು ಉತ್ತಮ ಅರ್ಥವ್ಯವಸ್ಥೆಯ ಕಡೆಗೆ ಮುಖ ಮಾಡುವ ವಿದ್ಯಾರ್ಥಿಗಳಿಗೆ ಸ್ವಉದ್ಯೋಗದ ಪರಿಕಲ್ಪನೆಯನ್ನು ಕಟ್ಟಿಕೊಡುವ ಮೂಲಕ ಅವರ ಆರ್ಥಿಕ ಸಾಧಿತದ ಉನ್ನತ ಹುದ್ದೆಗಳ ಕಡೆಗೆ ( ಖಂಖ ಖಕಖ ಖಈಖ) ಮುಖ ಮಾಡುವ ವ್ಯವಸ್ಥೆಯಾಗಿರದೆ, ತನ್ನ ಜೀವನಾಂಶದ ಆರ್ಥಿಕ ವ್ಯವಸ್ಥೆಗಷ್ಟೇ ಸೀಮಿತಗೊಳಿಸಲಾಗುತ್ತಿದೆ. ಅಲ್ಲದೆ ಹೊಸ ದಿಕ್ಕಿನ ಆರ್ಥಿಕ ಸಾಧನೆಯ ಕೊಂಡಿಯನ್ನು ಕಳಚಿ ತನ್ನನು ತಾನು ಸಿದ್ಧ ಮಾದರಿಯ ವ್ಯವಸ್ಥೆಯೊಳಗೆ ಕಟ್ಟಿಹಾಕಿಕೊಳ್ಳುವಂತೆ ಮಾಡುತ್ತಿದೆ. ಅಲ್ಲದೆ ಜಾಗತಿಕ ಮಟ್ಟದಲ್ಲಿ ಹಾಗೂ ಮಾಯಾನಗರಿಯಂತಹ ನಗರ ಪ್ರದೇಶದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವಲ್ಲಿ ಬೌದ್ಧಿಕವಾಗಿ ವಿಪುಲತೆಯನ್ನು ಕಾಣುವಂತದ್ದಾಗಿದೆ.

ಉದ್ಯೋಗ ಸೃಷ್ಟಿಯ ಹೊಣೆಗಾರಿಕೆ ಸಮಾಜದ ಜವಾಬ್ದಾರಿ ಎಂದು ನಂಬಿಸಿ ಸಂವಿಧಾನಿಕ ಆಶಯಗಳಿಗೆ ಕೊಳ್ಳಿಹಿಡಲಾಗುತ್ತಿದೆ. ಸಂವಿಧಾನಿಕ ಉದ್ಯೋಗವೆಂಬುದು ಎಲ್ಲಾ ಜನರ ಜೀವನ ಪದ್ಧತಿಯ ಒಂದು ಭಾಗವಾದರೆ, ಶೋಷಿತರಿಗೆ ಸಾಮಾಜಿಕ ಶೋಷಣೆಯಿಂದ ಬಿಡುಗಡೆಯಾಗುವ ಒಂದು ಆಯಾಮದ ಜೊತೆಗೆ ಆರ್ಥಿಕ ಭದ್ರತೆಯಾಗಿದೆ.ತರಬೇತಿ ಎಂಬುದು ಕೇವಲ ಜೀವನ ಶೈಲಿಯ ಒಂದು ಮಾರ್ಗವಾಗಿರಬೇಕು ಅದರಿಂದಲೇ ಆರ್ಥಿಕ ಸಾಧನೆ ಅಥವಾ ಹಿಡಿತ ಎಂಬುದು ಗ್ರಾಮೀಣ ಭಾಗದ ಯುವಜನತೆಗೆ ಕಗ್ಗಂಟಾಗಿದ್ದು, ಕೇವಲ ಬೆರಳೆಣಿಕೆಯಷ್ಟು ಜನರ ಜೀವನದ ಯಶಸ್ಸಾಗಿದೆ. ನೂತನ ಕನಸುಗಳನ್ನೊತ್ತು ಮಾಯಾನಗರಿಯ ಉದರದೊಳಗೆ ನುಸುಳಿದ ಗ್ರಾಮೀಣ ನಿರುದ್ಯೋಗ ಯುವಕರು ಆಧುನಿಕತೆಯ ಕೈಗಾರಿಕೀಕರಣ ಹಾಗೂ ಹೊಸ ಆರ್ಥಿಕ ನೀತಿಯ ಪರಿಣಾಮದಿಂದ ತತ್ತರಿಸಿ ಇಂದಿಗೂ ಕೂಲಿಕಾರ್ಮಿಕರಾಗಿಯೇ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಿದ್ದು ಯುವಕರ ಮನಸ್ಥಿತಿಗಳು ಪಲ್ಲಟಗೊಳ್ಳಲಾರಂಭಿಸುತ್ತಿವೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಗಣರಾಜ್ಯೋತ್ಸವದಂದು ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಅಭಿನಂದಿಸಲು ತೀರ್ಮಾನ

ಚಿಕ್ಕನಾಯಕನಹಳ್ಳಿ:-ಈ ಬಾರಿ ನಡೆಯಲಿರುವ ಗಣರಾಜ್ಯೋತ್ಸವದಂದು ವಿಶೇಷವಾಗಿ ಯಾವುದೇ ಕ್ರೀಡಾ ವಿಭಾಗದಲ್ಲಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಿದ್ದರೆ ಅಂತಹವರನ್ನು ಅಭಿನಂದಿಸಲಾಗುವುದು ಅದ್ದರಿಂದ ಈ ವರ್ಷದಲ್ಲಿ ಯಾರು ಯಾವುದೇ ವಿಭಾಗದಲ್ಲಿ ರಾಜ್ಯ ಮಟ್ಟದ ಇಲ್ಲವೇ ರಾಷ್ಟ್ರ ಮಟ್ಟದ ಕ್ರೀಡಾ ಕೂಟದಲ್ಲಿ ಪ್ರತಿನಿಧಿಸಿದ್ದರೆ ಅಂತಹವರು ತಮ್ಮ ಹೆಸರಿನೊಂದಿಗೆ ವಿವರವನ್ನು ತಾಲ್ಲೂಕು ಆಡಳಿತಕ್ಕೆ ನೀಡುವಂತೆ ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.
ಪಟ್ಟಣದ ತಾಲ್ಲೂಕು ಆಡಳಿತ ಸೌಧದಲ್ಲಿ ಸೋಮವಾರ ನಡೆದ ಗಣರಾಜ್ಯೋತ್ಸವಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಈ ಬಾರಿಯ 77ನೇ ಗಣರಾಜ್ಯೋತ್ಸವದಂದು ವಿಶೇಷವಾಗಿ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಅಭಿನಂದಿಸುವ ಮೂಲಕ ಆಚರಿಸುವಂತೆ ತಿಳಿಸಿದ ಅವರು ಗಣರಾಜ್ಯೋತ್ಸವದಂದು ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಅವರ ಸಿಬ್ಬಂದಿಯೊಂದಿಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ತಿಳಿಸಿದರು.
ತಹಸೀಲ್ದಾರ್ ಮಮತಾ ಎಂ. ಮಾತನಾಡಿ ಗಣರಾಜ್ಯೋತ್ಸವದಂದು ಎಲ್ಲಾ ಸರ್ಕಾರಿ ಇಲಾಖೆಗಳ



ಕಚೇರಿಗಳ ಮೇಲೆ ರಾಷ್ಟ್ರಧ್ವಜಾರೋಹಣ ಮಾಡಬೇಕು ಬೆಳಗ್ಗೆ ಯಾವರೀತಿ ಆಚರಿಸುತ್ತಿರೊ ಅದೇ ರೀತಿಯಲ್ಲಿ ಸಂಜೆ ಅವರೋಹಣವನ್ನು ಮಾಡಬೇಕು ಎಂದ ಅವರು ವೇದಿಕೆಯನ್ನು ಪ್ಲಾಸ್ಟಿಕ್ ಮುಕ್ತವಾಗಿ ಅಲಂಕಾರ ಮಾಡಬೇಕು ಈ ನಿಟ್ಟಿನಲ್ಲಿ ಪುರಸಭೆಯ ಮುಖ್ಯಾಧಿಕಾರಿ ಕರ್ತವ್ಯ ನಿರ್ವಹಿಸಬೇಕು, ಅಗತ್ಯವಾದ ಹೂ ಗಿಡಗಳನ್ನು ತೋಟಗಾರಿಕೆ ಇಲಾಖೆಯವರು ಮಾಡುವಂತೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪಟ್ಟಣದ ಶಾಲಾ ವಿದ್ಯಾರ್ಥಿಗಳಿಂದ ನಡೆಸಿಕೊಡುವಂತೆ ಶಿಕ್ಷಣ ಇಲಾಖೆಗೆ ತಿಳಿಸಿದ ಅವರು ಈ ಸಂದರ್ಭದಲ್ಲಿ ಧ್ವಜವಂದನೆಯ ವೇಳೆ ಪೊಲೀಸ್, ಹೋಮ್‌ಗಾರ್ಡ್ಸ್, ಸ್ಕೌಟ್ಸ್, ಗೈಡ್ಸ್ ಮತ್ತು ಎನ್ ಸಿಸಿ ವಿದ್ಯಾರ್ಥಿಗಳಿಂದ ಪಥಸಂಚಲನವನ್ನು ಉತ್ತಮವಾಗಿ ನಡೆಸುವಂತೆ ಗಣ ರಾಜ್ಯೋತ್ಸವದ ವೇಳೆ ಗಾಂಧೀಜಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್‌ರವರ ಭಾವಚಿತ್ರಗಳನ್ನು ಇಟ್ಟು ಆಚರಿಸಬೇಕು ಈ ಬಗ್ಗೆ ಎಲ್ಲಾ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ತಿಳಿಸಿದರು.
ಸಭೆಯಲ್ಲಿ ಇಓ ದೊಡ್ಡಸಿದ್ದಯ್ಯ, ಬಿಇಓ ಕಾಂತರಾಜು, ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಎಸ್. ರವಿಕುಮಾರ್, ಪುರಸಭಾ ಮುಖ್ಯಾಧಿಕಾರಿ ಮಂಜಮ್ಮ, ಬೆಸ್ಕಾಂ ಎಇಇ ಗವಿರಂಗಯ್ಯ, ಸಿಡಿಪಿಓ ಹೊನ್ನಪ್ಪ, ಪಶುಇಲಾಖೆ ಸಹಾಯಕ ನಿರ್ದೇಶಕ ಕಾಂತರಾಜು, ಕನ್ನಡಸಂಘದ ಅಧ್ಯಕ್ಷ ಸಿ.ಬಿ.ರೇಣುಕಸ್ವಾಮಿ ಸೇರಿದಂತೆ ದಲಿತ ಮುಖಂಡರುಗಳಾದ ಲಿಂಗದೇವರು, ಗೋ.ನಿ.ವಸಂತ್‌ಕುಮಾರ್, ಕೃಷ್ಣಮೂರ್ತಿ ಸೇರಿದಂತೆ ಇತರರು ಇದ್ದರು.

# ವಿವಾಹಿತೆಗೆ ಅಕ್ರಮ ಸಂಬಂಧದಿಂದ ಮಗುವಾದ್ರೆ ಅಪ್ಪ ಯಾರು? ಸುಪ್ರೀಂಕೋರ್ಟ್‌ನಿಂದ ಕುತೂಹಲದ ತೀರ್ಪು



ಮದುವೆಯಾದ ಸಂದರ್ಭದಲ್ಲಿ ವಿವಾಹಿತೆ ಬೇರೊಂದು ಸಂಬಂಧದಿಂದ ಗರ್ಭಿಣಿಯಾದರೆ, ಆ ಮಗುವಿನ ಅಪ್ಪ ಯಾರು ಎನ್ನುವ ಬಗ್ಗೆ ಈಚೆಗೆ ಸುಪ್ರೀಂಕೋರ್ಟ್ ಮಹತ್ವದ ತೀರ್ಪನ್ನು ನೀಡಿದೆ. ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ 112 ರ ಅಡಿಯಲ್ಲಿ, ಮಾನ್ಯ ವಿವಾಹದ ಸಮಯದಲ್ಲಿ ಜನಿಸಿದ ಮಗುವನ್ನು ಪತಿಯ ಕಾನೂನುಬದ್ಧ ಮಗು ಎಂದೇ ಊಹಿಸಲಾಗುತ್ತದೆ ಎಂದು ಕೋರ್ಟ್ ಹೇಳಿದೆ. ಇದರ ಅರ್ಥ ವಿವಾಹಿತೆಯ ಕಾನೂನುಬದ್ಧ ಗಂಡ ಆ ಮಗುವಿನ ಅಪ್ಪ ಎನ್ನಿಸಿಕೊಳ್ಳುತ್ತಾನೆ ಎಂದು ಕೋರ್ಟ್ ಹೇಳಿದೆ. ಮಗುವಿನ ಜೈವಿಕ ಪಿತೃತ್ವಕ್ಕಿಂತ ಘನತೆಗೆ ಆದ್ಯತೆ ನೀಡುವುದು ಮುಖ್ಯವಾಗಿರುವ ಕಾರಣದಿಂದ ಮಗು ಹೇಗೆ ಹುಟ್ಟಿದ್ದರೂ ಆಕೆಯ ಕಾನೂನುಬದ್ಧ ಗಂಡ ಆ ಮಗುವಿನ ಅಪ್ಪ ಆಗುತ್ತಾನೆ ಎಂದಿದೆ ಕೋರ್ಟ್. ದೈಹಿಕ ಸಂಪರ್ಕ
ಆದರೆ ಒಂದು ವೇಳೆ, ವಿವಾಹದ ಬಳಿಕ ದಂಪತಿ ನಡುವೆ ಗರ್ಭ ಧರಿಸುವ ರೀತಿಯಲ್ಲಿ ದೈಹಿಕ ಸಂಪರ್ಕ ನಡೆಯದೇ ಹೋದರೆ ಆ ಸಮಯದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸಲು ಪತಿಗೆ ಅವಕಾಶ ಕಲ್ಪಿಸಲಾಗುತ್ತದೆ. ಆದರೆ ಪತ್ನಿ ವ್ಯಭಿಚಾರಿಣಿ ಎಂದೇ ಅಥವಾ ಮಗುವಿನ ಡಿಎನ್‌ಎ ಪರೀಕ್ಷೆಯನ್ನು ನಡೆಸುವ ಮೂಲಕ ಇದು ಸಾಧ್ಯವಾಗುವುದಿಲ್ಲ ಎಂದು ಕೋರ್ಟ್ ಹೇಳಿದೆ.
ಬೇರೊಬ್ಬನಾದರೂ...
ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ 112 ಅನ್ನು ಉಲ್ಲೇಖಿಸಿರುವ ಸುಪ್ರೀಂಕೋರ್ಟ್, ಆ ಮಗುವಿನ ನಿಜವಾದ ತಂದೆ ಯಾರೇ ಇದ್ದರೂ, ಮಹಿಳೆಯ ಕಾನೂನುಬದ್ಧ ಪತಿಯೇ ಮಗುವಿನ ಅಪ್ಪ ಎನ್ನಿಸಿಕೊಳ್ಳುತ್ತಾನೆ. ಯಾವುದೇ ತಪ್ಪು ಮಾಡದ ಮಗುವನ್ನು ಕಳಂಕದಿಂದ ರಕ್ಷಿಸುವುದು ಮುಖ್ಯವಾಗುತ್ತದೆ. ಆದ್ದರಿಂದ ಮದುವೆಯಾದ ಬಳಿಕ ದಂಪತಿ ನಡುವೆ ದೈಹಿಕ ಸಂಬಂಧ ಇದ್ದರೆ, ಆ ಮಗು ಬೇರೆವರಿಗೆ ಹುಟ್ಟಿದರೂ ಮಹಿಳೆ ಕಾನೂನುಬದ್ಧ ಗಂಡನೇ ಆ ಮಗುವಿನ ಅಪ್ಪ ಆಗುತ್ತಾನೆ ಎಂದಿದ್ದಾರೆ ನ್ಯಾಯಮೂರ್ತಿಗಳು.
ಕೋರ್ಟ್ ಆದೇಶಿಸುವಂತಿಲ್ಲ
ಪಿತೃತ್ವವನ್ನು ನಿರಾಕರಿಸಲು ನ್ಯಾಯಾಲಯಗಳು ಡಿಎನ್ ಎ ಪರೀಕ್ಷೆಗೆ ಇಂಥ ಪ್ರಕರಣಗಳಲ್ಲಿ ಆದೇಶಿಸುವಂತಿಲ್ಲ ಎಂದಿರುವ ಕೋರ್ಟ್, ಮಗುವಿನ ಭಾವನಾತ್ಮಕ, ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಕಾಪಾಡುವುದು, ಕುಟುಂಬದ ಖಾಸಗಿ ವಿಷಯಗಳನ್ನು ಮಗುವಿಗೆ ಕಳಂಕ ತರಲು ಬಳಸುವುದನ್ನು ತಡೆಯುವುದು ಈ ನಿಯಮದ ಗುರಿಯಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

# ನಿದ್ರಾ ಕೊರತೆ?: ಬೆಂಗಳೂರಿನ ಅರ್ಧದಷ್ಟು ಮಂದಿ ನಿದ್ದೆ ಮಾಡುವುದು ಕೇವಲ 4–6 ಗಂಟೆ ಸಮಯ ಅಷ್ಟೇ

ಅನೇಕ ಸಮಸ್ಯೆಗಳು, ಒತ್ತಡಗಳ ನಡುವೆ ಮಹಾನಗರಿ ಬೆಂಗಳೂರಿನ ನಿವಾಸಿಗಳು ನಿದ್ರಾಹೀನತೆಯಿಂದ ಬಳಲುತ್ತಿದ್ದಾರೆ ಎಂದು ಇತ್ತೀಚಿನ ಸಮೀಕ್ಷೆಯೊಂದು ಹೇಳುತ್ತದೆ. ನಗರದ ಶೇ.56 ರಷ್ಟು ಜನರು ಪ್ರತಿ ರಾತ್ರಿ ನಿದ್ದೆ ಮಾಡುವ ಅವಧಿ ಆರು ಗಂಟೆಗಳಿಗಿಂತಲೂ ಕಡಿಮೆಯಾಗಿದೆ ಎಂದು ವಿಶ್ವ ನಿದ್ರಾ ದಿನದ ಸಂದರ್ಭದಲ್ಲಿ ಲೋಕಲ್ ಸರ್ಕಲ್ಸ್ ನಡೆಸಿದ ಇತ್ತೀಚಿನ ಸಮೀಕ್ಷೆಯು ಬಹಿರಂಗಪಡಿಸಿದೆ. ಮಾರ್ಚ್ 14ರಂದು ವಿಶ್ವ ನಿದ್ರಾ ದಿನ ಆಚರಿಸಲಾಗುತ್ತದೆ.
'ಭಾರತ 2025 ಹೇಗೆ ನಿದ್ರಿಸುತ್ತದೆ' ಎಂಬ ಶೀರ್ಷಿಕೆಯಡಿಯಲ್ಲಿ ಸಮೀಕ್ಷೆ ನಡೆಸಲಾಗಿದ್ದು, ನಗರದ 5,563 ವ್ಯಕ್ತಿಗಳಿಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲಾಗಿದೆ. ಕಳಪೆ ನಿದ್ರೆಯ ಗುಣಮಟ್ಟ ಮತ್ತು ಅದರ ಸಂಭಾವ್ಯ ಆರೋಗ್ಯ ಅಪಾಯಗಳ ಬಗ್ಗೆ ಹೆಚ್ಚುತ್ತಿರುವ ಕಳವಳವನ್ನು ಸಮೀಕ್ಷೆ ಎತ್ತಿ ತೋರಿಸುತ್ತದೆ.
ಸಮೀಕ್ಷೆಗೆ ಒಳಗಾದವರಲ್ಲಿ, ಶೇ.47 ರಷ್ಟು ಜನರು ಪ್ರತಿ ರಾತ್ರಿ ಕೇವಲ 4ರಿಂದ 6 ಗಂಟೆಗಳ ಕಾಲ ನಿದ್ರಿಸುತ್ತಿದ್ದಾರೆ ಎಂದು ವರದಿ ಮಾಡಿದರೆ, ಶೇ.9 ರಷ್ಟು ಜನರು ನಾಲ್ಕು ಗಂಟೆಗಳಿಗಿಂತ ಕಡಿಮೆ ನಿದ್ರೆ ಮಾಡುತ್ತಿದ್ದಾರೆ ಎಂದು ವರದಿಯಾಗಿದೆ. ಸಂಶೋಧನೆಗಳ ಪ್ರಕಾರ, ಪ್ರತಿಕ್ರಿಯಿಸಿದವರಲ್ಲಿ ಕೇವಲ 3% ಜನರು ಮಾತ್ರ ವೈದ್ಯರು, ಆರೋಗ್ಯ ತಜ್ಞರು ಶಿಫಾರಸು ಮಾಡುವ ದಿನಕ್ಕೆ 8ರಿಂದ 10 ಗಂಟೆಗಳ ಕಾಲ ನಿದ್ದೆ ಮಾಡುತ್ತಾರೆ.
ನಿದ್ದೆ ಅಡ್ಡಿಯಾಗುತ್ತಿರುವ ಅಂಶಗಳು
ಪದೇ ಪದೇ ಮೂತ್ರ ವಿಸರ್ಜನೆಗೆ ಹೋಗಬೇಕೆಂದೆನಿಸುವುದು





ನಿದ್ರಾಭಂಗಕ್ಕೆ ಪ್ರಮುಖ ಕಾರಣವಾಗಿದೆ. ರಾತ್ರಿ ತಡವಾಗಿ ಮಲಗುವುದು, ಮುಂಜಾನೆ ಮನೆಯಲ್ಲಿ ಅವಸರದ ಕೆಲಸ, ಕಚೇರಿಗೆ ಹೊರಡುವ ಒತ್ತಡ, ಮೊಬೈಲ್ ಕರೆಗಳು ಮತ್ತು ಇತರ ಕೆಲಸ-ಕಾರ್ಯಗಳು, ಒತ್ತಡಗಳು, ಹೊರಗಡೆಯಿಂದ ಬರುವ ಶಬ್ದದ ಅಡಚಣೆಯಿಂದ ನಿದ್ದೆ ಬರುತ್ತಿಲ್ಲ ಎಂದು ಹೇಳುವವರು ಅಧಿಕ ಮಂದಿಯಿದ್ದಾರೆ.
ಸಂಗಾತಿ ಅಥವಾ ಮಗುವಿಗೆ ಸಂಬಂಧಿಸಿದ ಅಡಚಣೆಗಳು ಮತ್ತು ಅನಾನುಕೂಲವಾದ ಹಾಸಿಗೆಗಳು ಸಹ ನಿದ್ರಾ ಭಂಗಕ್ಕೆ ಕಾರಣವಾಗಿದೆ. ಇದಲ್ಲದೆ, ಪ್ರತಿಕ್ರಿಯಿಸಿದವರಲ್ಲಿ ಶೇಕಡಾ 17ರಷ್ಟು ಮಂದಿ ನಿರ್ದಿಷ್ಟ ಅಡಚಣೆಗಳಿಲ್ಲದೆ ಎಂಟು ಗಂಟೆಗಳ ಕಾಲ ನಿರಂತರವಾಗಿ ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾರೆ.
ತಮ್ಮ ನಿದ್ರೆಯ ಕೊರತೆಯನ್ನು ಸರಿದೂಗಿಸಲು, ಜನರು ಭಾನುವಾರದಂದು ಮಧ್ಯಾಹ್ನ ನಿದ್ರೆ ಮಾಡುತ್ತಾರೆ, ವಾರಾಂತ್ಯದಲ್ಲಿ ತಮ್ಮ ನಿದ್ರೆಯ ಸಮಯವನ್ನು ವಿಸ್ತರಿಸುತ್ತಾರೆ ಮತ್ತು ರಜಾದಿನಗಳಲ್ಲಿ ವಿಶ್ರಾಂತಿ ಪಡೆಯಲು ಬಯಸುತ್ತಾರೆ ಎಂದು ಸಮೀಕ್ಷೆ ಹೇಳುತ್ತದೆ. ಸುಮಾರು 28% ಜನರು ತಮ್ಮ ನಿದ್ರೆಯ ಕೊರತೆಯನ್ನು ಸರಿದೂಗಿಸಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ. ಇದು ದೀರ್ಘಕಾಲದ ನಿದ್ರೆಯ ಕೊರತೆಗೆ ಕಾರಣವಾಗುತ್ತದೆ.
ನಿದ್ರಾಹೀನತೆಯಿಂದ ಅನಾರೋಗ್ಯ ಸಮಸ್ಯೆ
ನಿದ್ರಾಹೀನತೆಯಿಂದ ಹೃದಯರಕ್ತನಾಳದ ಕಾಯಿಲೆಗಳು, ತೂಕ ಹೆಚ್ಚಾಗುವುದು, ಟೈಪ್ 2 ಮಧುಮೇಹ ಮತ್ತು ದುರ್ಬಲಗೊಂಡ ಅರಿವಿನ ಕಾರ್ಯದಂತಹ ಹೆಚ್ಚಿನ ಅಪಾಯಕ್ಕೆ ಕಾರಣವಾಗುತ್ತದೆ. ಬೆಂಗಳೂರಿನ ನಿವಾಸಿಗಳಲ್ಲಿ ಉತ್ತಮ ನಿದ್ರೆಯ ನೈರ್ಮಲ್ಯ ಮತ್ತು ನಿದ್ರೆಗೆ ಸಂಬಂಧಿಸಿದ ಆರೋಗ್ಯ ಅಪಾಯಗಳ ಬಗ್ಗೆ ಹೆಚ್ಚಿದ ಜಾಗೃತಿಯ ತುರ್ತು ಅಗತ್ಯವನ್ನು ಸಂಶೋಧನೆಗಳು ಒತ್ತಿಹೇಳುತ್ತವೆ. ದೇಶಾದ್ಯಂತ ಇತ್ತೀಚಿನ ದಿನಗಳಲ್ಲಿ ಇದೇ ರೀತಿಯ ಪ್ರವೃತ್ತಿ ಕಂಡುಬಂದಿದೆ, ಪ್ರತಿಕ್ರಿಯಿಸಿದವರಲ್ಲಿ 59% ಜನರು ಆರು ಗಂಟೆಗಳಿಗಿಂತ ಕಡಿಮೆ ಸಮಯ ನಿರಂತರ ನಿದ್ದೆ ಮಾಡುತ್ತಿದ್ದಾರೆ. ದೇಶಾದ್ಯಂತ 348 ಜಿಲ್ಲೆಗಳಿಂದ 43,000 ಕ್ಕೂ ಹೆಚ್ಚು ಪ್ರತಿಕ್ರಿಯೆಗಳನ್ನು ಸಂಗ್ರಹಿಸಿದ ಸಮೀಕ್ಷೆಯು ಪ್ರತಿಕ್ರಿಯಿಸಿದವರಲ್ಲಿ 61% ಪುರುಷರು ಮತ್ತು 39% ಮಹಿಳೆಯರಾಗಿದ್ದಾರೆ.

## ನಿದ್ರಾ ಕೊರತೆಯ ಲಕ್ಷಣಗಳು

ದೈಹಿಕ: ತಲೆನೋವು, ನಿರಂತರ ಆಯಾಸ, ಕೈ ನಡುಕ, ಕಣ್ಣುರೆಪ್ಪೆ ಬೀಳುವಿಕೆ.
ಮಾನಸಿಕ: ಕಿರಿಕಿರಿ, ಅಸಂತೋಷ, ಅಸ್ಪಷ್ಟ ಚಿಂತನೆ, ಹಠಾತ್ ವರ್ತನೆ.
ಕಾರ್ಯಕ್ಷಮತೆ: ಕೆಲಸ ಅಥವಾ ಶಾಲೆಯಲ್ಲಿ ಏಕಾಗ್ರತೆ ಕೊರತೆ, ತೀರ್ಪು ನೀಡುವಲ್ಲಿ ತೊಂದರೆ.
ಇತರ: ಮೈಕ್ರೋಸ್ಲೀಪ್ಸ್ (ಕೆಲವೇ ಸೆಕೆಂಡುಗಳ ನಿದ್ರೆ), ನಿರಂತರ ನಿದ್ದೆ ಬರದಿರುವುದು.
ಕಾರಣಗಳು
ಜೀವನಶೈಲಿ: ಕೆಫೀನ್, ನಿಕೋಟಿನ್, ಮದ್ಯಪಾನದ ಸೇವನೆ, ರಾತ್ರಿ ತಡವಾಗಿ ಊಟ ಮಾಡುವುದು.
ಆರೋಗ್ಯ ಸಮಸ್ಯೆಗಳು: ನಿದ್ರೆಯಲ್ಲಿ ಉಸಿರುಕಟ್ಟುವಿಕೆ ಆತಂಕ ನೋವಿನ ಕಾಯಿಲೆಗಳು.
ಪರಿಸರ: ಅನುಕೂಲಕರವಲ್ಲದ ಹಾಸಿಗೆ, ಸಂಗಾತಿ ಅಥವಾ ಮಗುವಿನಿಂದ ಅಡಚಣೆಗಳು.



ಒತ್ತಡ: ಕೆಲಸದ ಒತ್ತಡ ಮತ್ತು ದೈಹಿಕ ಆರೋಗ್ಯದ ಸಮಸ್ಯೆಗಳು.
ಪರಿಹಾರಗಳು ಮತ್ತು ನಿರ್ವಹಣೆ
ಪರಿಹಾರಗಳು: ಲ್ಯಾವೆಂಡರ್ ಎಣ್ಣೆ, ಬೆಚ್ಚಗಿನ ಹಾಲು ಮತ್ತು ಜೇನುತುಪ್ಪ, ಕ್ಯಾಮೊಮೈಲ್ ಚಹಾ ಕುಡಿಯುವುದು.
ಜೀವನಶೈಲಿ ಬದಲಾವಣೆ: ಕೆಫೀನ್, ಮದ್ಯಪಾನ ಕಡಿಮೆ ಮಾಡುವುದು, ಮಲಗುವ ಮುನ್ನ ಟಿವಿ ನೋಡುವುದನ್ನು ತಪ್ಪಿಸುವುದು.
ವೈದ್ಯಕೀಯ ಸಲಹೆ: ನಿದ್ರಾಹೀನತೆಯು ದೀರ್ಘಕಾಲದ ಸಮಸ್ಯೆಯಾಗಿದ್ದರೆ ವೈದ್ಯರನ್ನು ಸಂಪರ್ಕಿಸುವುದು ಅತಿ ಮುಖ್ಯ.
ದೀರ್ಘಕಾಲದ ಪರಿಣಾಮಗಳು
ತೂಕ ಹೆಚ್ಚಳ, ಮಧುಮೇಹದ ಅಪಾಯ.
ಹೃದಯ ರಕ್ತನಾಳದ ಕಾಯಿಲೆಗಳ ಅಪಾಯ.
ಅರಿವಿನ ಕಾರ್ಯಗಳ ಮೇಲೆ ಪರಿಣಾಮ.



# ಟಾಲ್‌ಸ್ಟಾಯ್‌ನ 'ಮನುಷ್ಯನಿಗೆಷ್ಟು ಭೂಮಿ ಬೇಕು' ಎಂಬ ಕಥೆ ಸಾಕಷ್ಟು ಜನಪ್ರಿಯ

ಸೂರ್ಯಪ್ರಗತಿ ನ್ಯೂಸ್.ಕಾಂ

ಒಂದೂರಿನಲ್ಲಿ ತನ್ನ ಮಿತಿಯಲ್ಲೇ ನೆಮ್ಮದಿಯಾಗಿರುವ ಒಂದು ರೈತ ಕುಟುಂಬ. ಅಲ್ಲೆಲ್ಲೋ ದೂರದ ಇನ್ನೊಂದು ಊರಿನಲ್ಲಿ ಎಷ್ಟು ಬೇಕಾದರೂ ಜಮೀನು ಕೊಡುತ್ತಾರೆ. ಅದೂ ಪುಕ್ಕಟೆ ಎಂದು ಕಿವಿಗೆ ಬಿದ್ದಾಗ, ರೈತನ ಆಸೆ ಗರಿಗೆದರುತ್ತದೆ. ಆತ ಬುತ್ತಿ ಕಟ್ಟಿಕೊಂಡು ಪ್ರಯಾಣ ಹೊರಟೇ ಬಿಡುತ್ತಾನೆ. ಅಲ್ಲಿ ಹೋದರೆ, ಅವನ ಕಿವಿಗೆ ಬಿದ್ದಿದ್ದಷ್ಟೂ ನಿಜ! ಎಷ್ಟು ಬೇಕಾದರೂ ಭೂಮಿ ಸಿಗುತ್ತೆ. ಆದರೆ ಒಂದು ಷರತ್ತು. ಬೆಳಿಗ್ಗೆ ಸೂರ್ಯೋದಯದ ಸಮಯದಲ್ಲಿ ಆತ ನಡೆಯಲು, ಓಡಲು ಆರಂಭಿಸಬೇಕು. ಸಂಜೆಯೊಳಗೆ ನಡಿಗೆಯಲ್ಲೇ ವಾಪಸ್ ಬಂದು ತಾನು ಹೊರಟ ತಾಣವನ್ನೇ ಮುಟ್ಟಬೇಕು. ಹಾಗಾದಾಗ ಅವನು ನಡಿಗೆಯಲ್ಲಿ ಕ್ರಮಿಸಿದ ಅಷ್ಟೂ ಭೂಮಿ ಅವನದೇ.
ಸರಿ, ಮಾರನೇ ಬೆಳಿಗ್ಗೆ ರೈತ ನಡೆಯತೊಡಗುತ್ತಾನೆ. ನಡಿಗೆ ಸಾಲದೆಂದು ಓಡತೊಡಗುತ್ತಾನೆ. ಊಟ, ತಿಂಡಿಗೆ ನಿಂತರೆ ಕಾಲಹರಣವೆಂದು ಎಲ್ಲೂ ವಿರಮಿಸದೆ ಸಾಧ್ಯವಾದಷ್ಟೂ ವೇಗವಾಗಿ ಗರಿಷ್ಠ ದೂರ ಕ್ರಮಿಸಲು ಉದ್ಯುಕ್ತನಾಗುತ್ತಾನೆ. ಹಾಗೇ ನಡೆಯುತ್ತ, ಓಡುತ್ತ ಮಧ್ಯಾಹ್ನ ಕಳೆಯಿತು. ಸಂಜೆ ಸಮೀಪಿಸಿತು. ಈಗ ತಡವಾಗಿಹೋಯಿತೆಂಬ ಆತಂಕದಲ್ಲಿ, ಆರಂಭದ ಬಿಂದು ಮುಟ್ಟಲು ಶಕ್ತಿ ಮೀರಿ ಓಡುತ್ತಾನೆ.
ಕೊನೆಗೆ ಕರಾರುವಕ್ಕಾಗಿ ಸೂರ್ಯಾಸ್ತದ ಸಮಯಕ್ಕೆ ತಾನು ಹೊರಟಿದ್ದ ಜಾಗವನ್ನೇ ಬಂದು ತಲುಪುತ್ತಾನೆ. ಆದರೆ, ಅಲ್ಲಿ ಮುಟ್ಟಿದೊಡನೆ, ಆಯಾಸಕ್ಕೆ ಕುಸಿದು ಬಿದ್ದು ಸತ್ತೇ ಹೋಗುತ್ತಾನೆ. ಈಗ ಅವನನ್ನು ಆರಡಿ ಮೂರಡಿ ಗುಂಡಿಯಲ್ಲಿ ಹೂಳುತ್ತಾರೆ. ಕಡೆಗೆ ಅವನಿಗೆ ತನ್ನದಾಗಿ ದಕ್ಕಿದ ಭೂಮಿ ಅಷ್ಟೇ.

ಇದು ಕಥೆ. ಈ ಕಥೆಯನ್ನು ಲಂಕೇಶರು ಹಲವಾರು ಬಾರಿ ಉಲ್ಲೇಖಿಸಿ ಪತ್ರಿಕೆಯಲ್ಲಿ ಬರೆದರು. ಲಂಕೇಶ್ ಬೆಳೆಯುವ ಹಂತದಲ್ಲಿ, ಅದೂ ಅವರ ವ್ಯಕ್ತಿತ್ವ ರೂಪುಗೊಳ್ಳುವ ಘಟ್ಟದಲ್ಲಿ ಅವರ ಕೈಗೆ ಸಿಕ್ಕಿದ ಈ ಕಥೆ, ಸಾಹಿತ್ಯ ಲೋಕಕ್ಕೆ ಅವರ ಕಣ್ಣು ತೆರೆಯಿಸಿತು. ಅವರೊಳಗಿನ ಬರಹಗಾರನನ್ನೇ ಎಚ್ಚರಿಸಿತು. ತಮ್ಮ ಆತ್ಮಕಥೆ 'ಹುಳಿಮಾವಿನ ಮರ'ದಲ್ಲಿಯೂ ಲಂಕೇಶ್ ಈ ಕಥೆಯ ಪ್ರಸ್ತಾಪ ಮಾಡುವುದು ಹೀಗೆ:

"...ನಮ್ಮೂರ ವಯಸ್ಕರ ಶಿಕ್ಷಣದ ಪುಸ್ತಕ ಭಂಡಾರ ಉಪಯೋಗವಾದದ್ದು ನನಗೊಬ್ಬನಿಗೇ ಎಂದು ಕಾಣುತ್ತದೆ.






ಆ ಲೈಬ್ರರಿಯಲ್ಲಿನ ಶಾಲು ಸಾಬಿ, ನಮಗೆಷ್ಟು ಭೂಮಿ ಬೇಕು, ಧ್ರುವ ಚರಿತ್ರೆ, ಚಂದ್ರಹಾಸ, ಗರುಡಗಂಬದ ದಾಸಯ್ಯ, ಮಂಕುತಿಮ್ಮನ ಕಗ್ಗ ಮುಂತಾದ ಪುಸ್ತಕಗಳು ನನಗೆ ಕೊಟ್ಟ ಕಾವು ಅಮೂಲ್ಯವಾದದ್ದು. ಇವತ್ತಿಗೂ ನನ್ನ ವ್ಯಕ್ತಿತ್ವದ ಭಾಗವಾಗಿರುವಂಥಾದ್ದು'.

ನನಗೆ ಕಥೆ ಎಂದರೆ ಏನು ಎಂದು ಗೊತ್ತಾದದ್ದೇ ಟಾಲ್‌ಸ್ಟಾಯ್‌ನ ನಮಗೆಷ್ಟು ಭೂಮಿ ಬೇಕು ಎಂಬುದನ್ನು ಓದಿದಾಗ. ಇದರ ಪ್ರಭಾವವನ್ನು ನೀವು ಇವತ್ತಿಗೂ ನನ್ನ ಬರಹಗಳಲ್ಲಿ ಕಾಣಬಹುದು. ಭೂಮಿಯ ಆಸೆಯಿಂದ ಮಾಯಾವಿಯೊಬ್ಬನ ಭರವಸೆಯನ್ನು ನೆಚ್ಚಿ ಹೋಗಿ ಅಸು ನೀಗಿದವನ ಕಥೆ ಇದು. ನೆಮ್ಮದಿಯ ಮಾತುಕತೆಯೊಂದಿಗೆ ಈ ಕಥೆ ಶುರುವಾಗುತ್ತದೆ. ಊಟ, ತಿಂಡಿ, ಪ್ರೀತಿ, ಸ್ನೇಹ ಇವೇ ಮುಖ್ಯ ಎಂಬಂತೆ ಶುರುವಾದ ಕಥೆ ದುರಾಶೆಯಿಂದಾದ ವಿನಾಶವನ್ನು ತೋರಿ ಮುಗಿಯುತ್ತದೆ. ಈ ಕಥೆ ನಿಜಕ್ಕೂ ಸಾಹಿತ್ಯಿಕ ಕೃತಿಯಲ್ಲ. ಬರೀ ತಾತ್ವಿಕ ಕಗ್ಗವೂ ಅಲ್ಲ. ಕಥೆ ಬರೆಯುವ ಗೀಳಿನಿಂದ ಬಂದದ್ದಲ್ಲ. ಈ ಬದುಕಿನಲ್ಲಿ ನೆಮ್ಮದಿ, ಶಾಂತಿ, ಪ್ರೇಮ, ಆಸ್ತಿ ಇವೆಲ್ಲವುಗಳ ಸ್ಥಾನವೇನು ಎಂದು ಕೇಳುತ್ತಲೇ ಈ ಬದುಕಿನ ಉದ್ದೇಶವೇನು? ಎಂದು ಈ ಕಥೆ ಪ್ರಶ್ನಿಸುತ್ತದೆ.
ಈ ಕಥೆ ನನ್ನಲ್ಲಿ ಬಿತ್ತಿದ ಬೀಜ ಮೊಳೆಯುತ್ತಲೇ ಹೋಯಿತು. ಇದರಿಂದಾಗಿ ನಾನು ಕಲಾವಿದನೆಂದುಕೊಂಡಾಗ ಆ ಬಗ್ಗೆ ಅಸಹ್ಯಪಡುವುದು, ತತ್ವಜ್ಞಾನಿಯೆಂದುಕೊಂಡಾಗ ಆ ಬಗ್ಗೆ ಗೇಲಿ ಮಾಡಿಕೊಳ್ಳುವುದು ಸಾಧ್ಯವಾಯಿತು. ಆಮೇಲೆ ಈ ಕಥೆಯ ಮೂಲಕ ಕ್ರಿಯಾಶೀಲ ಬರವಣಿಗೆ ಅತ್ಯಂತ ನೇರ, ಸರಳ ಎಂಬುದು ತಿಳಿಯಿತು. ನಾನು ಈ ಕಥೆಯಿಂದಾಗಿಯೇ ಇವತ್ತಿಗೂ ಅಮೂರ್ತದಲ್ಲಿ ಮುಳುಗಬಲ್ಲ ಬುದ್ಧಿಜೀವಿಯಲ್ಲ, ನನ್ನ ಮನಸ್ಸು ನಾನು ಕಂಡದ್ದನ್ನು ಅನುಸರಿಸಿ ಎಲ್ಲ ತಾಪ ಮತ್ತು ತಪವನ್ನು ಮುಟ್ಟಲು ಯತ್ನಿಸುತ್ತದೆ ಮತ್ತು ಈ ಕಥೆಯಿಂದಾಗಿ ಬರೆಯುವುದರ, ಬದುಕುವುದರ ಘನತೆ ತಿಳಿಯಿತು. ನನ್ನ ಒಳತೋಟಿಯನ್ನು ಒಳಗೊಳ್ಳದ ಘನತೆ ನಿಷ್ಪ್ರಯೋಜಕ. ಹಾಗೆಯೇ ಒಳತೋಟಿಯನ್ನೇ ನೆಚ್ಚಿ ಬಾಹ್ಯದ ಬಗ್ಗೆ ಕಾಳಜಿ ವಹಿಸದಿರುವುದೂ ಒಳ್ಳೆಯದಲ್ಲ. ಇಷ್ಟೆಲ್ಲ ಆಗ ಆಯಿತೆಂದು ನಾನು ಹೇಳುತ್ತಿಲ್ಲ. ಸಾಹಿತ್ಯದ ಯಕ್ಷಿಣಿ ಮತ್ತು ಲೌಕಿಕತೆ ನನ್ನನ್ನು ಮುಟ್ಟಿತ್ತು. ಮನುಷ್ಯರ ಕ್ರಿಯೆಗಳ ಸ್ವಾರಸ್ಯವನ್ನು ಅರಿಯುವುದರ ಬಗ್ಗೆ ಗಮನ ಹರಿಯಿತು..."

ಇದನ್ನು ಬರೆಯುತ್ತಿರುವ ಲಂಕೇಶ್, ಮುಕ್ಕಾಲು ಜೀವನವನ್ನು ಪೂರೈಸಿದ, ಮಾಗಿದ ಲಂಕೇಶ್ ಎಂಬುದನ್ನು ಮರೆಯದಿರೋಣ. ಇರಲಿ. ಈ ಕಥೆಗೆ ಸಂಬಂಧಿಸಿ ಇಲ್ಲಿ ಇನ್ನೊಂದು ಕುತೂಹಲದ ಅಡಿಟಿಪ್ಪಣಿಯಿದೆ.

"ಇಡೀ ವಿಶ್ವವನ್ನು ಜಯಿಸಿದ" ಅಲೆಕ್ಸಾಂಡರ್ ಭಾರತದ ಮೇಲೆ (ಕ್ರಿಸ್ತಪೂರ್ವ ನಾಲ್ಕನೇ ಶತಮಾನದಲ್ಲಿ) ದಂಡೆತ್ತಿ ಬಂದಾಗಿನ ಸಂದರ್ಭ. ಇಲ್ಲಿ ತಾನು ಹೋದ ಬಂದ ಕಡೆ ಸ್ಥಳೀಯ ತತ್ವಜ್ಞಾನಿಗಳು, ಪಂಡಿತರನ್ನು ಕರೆಯಿಸಿ ಅವರೊಂದಿಗೆ ಜೀವನದ ಗಹನ ವಿಚಾರಗಳನ್ನು ಚರ್ಚಿಸುವುದು ಅವನ ಅಭ್ಯಾಸ. ಈ ಪ್ರಸಂಗವನ್ನು ಅಮರ್ತ್ಯ ಸೇನ್ ತಮ್ಮ 'ದಿ ಆರ್ಗ್ಯುಮೆಂಟೇಟೀವ್ ಇಂಡಿಯನ್' ಕೃತಿಯಲ್ಲಿ ನಿರೂಪಿಸಿದ್ದಾರೆ.
ಹಾಗೊಮ್ಮೆ ಅಲೆಕ್ಸಾಂಡರ್ ವಾಯವ್ಯ ಭಾರತದ ಜೈನ ಪಂಡಿತರನ್ನು ಭೇಟಿ ಮಾಡುವಾಗ ಅವರು ತನ್ನಂಥ ಮಹಾಯೋಧನಿಗೆ ತೋರುವ ನಿರ್ಲಕ್ಷ್ಯಕ್ಕೆ ಕಸಿವಿಸಿಗೊಂಡು ಅವರನ್ನು ಪ್ರಶ್ನಿಸುತ್ತಾನೆ. ಅದಕ್ಕೆ ಜೈನ ತತ್ವವೇತ್ತರು ನೀಡಿದ ಉತ್ತರ ಕೌತುಕಮಯವಾಗಿದೆ.
ಅವರು ಹೇಳುತ್ತಾರೆ: "ಅಲೆಕ್ಸಾಂಡರ್ ದೊರೆಯೇ, ಪ್ರತಿಯೊಬ್ಬ




ಮನುಷ್ಯನಿಗೂ ತಾನು ನಿಂತ ಜಾಗದಷ್ಟು ಭೂಮಿ ಮಾತ್ರ ಲಭ್ಯ. ನೀನೂ ನಮ್ಮಂತೆಯೇ ನರಮನುಷ್ಯ. ಏನೆಂದರೆ ನೀನು ಸದಾ ಗಡಿಬಿಡಿಯಲ್ಲಿರುತ್ತೀ. ಅದರಿಂದ ಏನೂ ಉಪಯೋಗವಿಲ್ಲ. ನಿನ್ನ ಊರಿನಿಂದ ಇಷ್ಟೊಂದು ದೂರ ಬಂದು ನಿನಗೂ ಹಿಂಸೆ, ಬೇರೆಯವರಿಗೂ ತೊಂದರೆ... ಶೀಘ್ರದಲ್ಲೇ ನೀನು ಮೃತನಾಗುತ್ತೀ. ಆಮೇಲೆ ನಿನ್ನನ್ನು ಹೂಳಲು ಎಷ್ಟು ಜಾಗ ಬೇಕೋ, ಅಷ್ಟು ಭೂಮಿಗೆ ಮಾತ್ರ ನೀನು ಒಡೆಯ..!"
ಎಂಥ ಆಶ್ಚರ್ಯವಿದು! ಕ್ರಿಸ್ತಪೂರ್ವ ನಾಲ್ಕನೇ ಶತಮಾನದಲ್ಲಿ ಜೈನ ತತ್ವಜ್ಞಾನಿಗಳು ಬೋಧಿಸಿದ್ದೂ ಅದೇ, ಎರಡು ಶತಮಾನಗಳ ಹಿಂದೆ ಟಾಲ್‌ಸ್ಟಾಯ್ ಬರೆದ ಕಥೆಯ ಸಾರವೂ ಅದೇ. ಜೀವಪೋಷಕ ಜಿಜ್ಞಾಸೆಯೊಂದು ಹೀಗೆ ಶತಮಾನಗಳನ್ನು ಹಾಯ್ದು, ಖಂಡಾಂತರ ದಾಟಿ ಮತ್ತೆ ಪ್ರತಿಧ್ವನಿ ಪಡೆದದ್ದು ಎಂಥ ಸೋಜಿಗ!

-ಎನ್.ಎಸ್. ಶಂಕರ್



# ಸನ್ ಸುದ್ದಿ



ತುಮಕೂರಿನ ಗಾಜಿನ ಮನೆ ಆವರಣದಲ್ಲಿ 17ನೇ ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸಮಾರೋಪ ಸಮಾರಂಭದಲ್ಲಿ ಸಮಾಜ ಸೇವಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ದಿಯಾಚಾರಿಟಬಲ್ ಟ್ರಸ್ಟ್ ಇಂಡಿಯಾದ ಸಂಸ್ಥಾಪಕರಾದ ಡಾ.ಇಮ್ಯಾನ್ಯುಯಲ್ ಜಯಕುಮಾರ್ ಅವರನ್ನು ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಶ್ವ ಒಕ್ಕಲಿಗರ ಪೀಠಾಧ್ಯಕ್ಷರಾದ ಡಾ. ಶ್ರೀ.ಶ್ರೀ. ನಿಶ್ಚಲಾನಂದ ನಾಥ ಸ್ವಾಮೀಜಿ, ಮಾಜಿ ಸಹಕಾರ ಸಚಿವರು ಹಾಗೂ ಹಾಲಿ ಶಾಸಕರಾದ ಕೆ. ಎನ್. ರಾಜಣ್ಣ, ನಗರ ಶಾಸಕರಾದ ಜಿ.ಬಿ. ಜ್ಯೋತಿ ಗಣೇಶ್, ಸಮ್ಮೇಳನದ ಅಧ್ಯಕ್ಷರಾದ ಡಾ. ಕರೀಗೌಡ ಬೀಚನಹಳ್ಳಿ, ಡಾ. ಎಸ್. ನಾಗಣ್ಣ, ಕ.ಸಾ.ಪ. ಅಧ್ಯಕ್ಷರಾದ ಕೆ. ಎಸ್. ಸಿದ್ದಲಿಂಗಪ್ಪ ಮತ್ತಿತರರು ಹಾಜರಿದ್ದರು.



ತುಮಕೂರು ವೀರಶೈವ ಸಹಕಾರ ಬ್ಯಾಂಕ್ ವತಿಯಿಂದ 2024 –25 ನೇ ಸಾಲಿನ ಲಾಭದಲ್ಲಿನ ಶೇ2% ಹಣವನ್ನು ಸಹಕಾರ ಶಿಕ್ಷಣ ನಿಧಿಗೆ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್ ಗಳ ಮಹಾಮಂಡಳದ ಸಿ.ಇ.ಒ.ಮಹಾಂತೇಶ್ ರವರಿಗೆ ಚೆಕ್ ನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಕೆ.ಜೆ. ರುದ್ರಪ್ಪ,ಉಪಾಧ್ಯಕ್ಷರಾದ ಕೆ. ಮಲ್ಲಿಕಾರ್ಜುನಯ್ಯನವರು ಮತ್ತು ನಿರ್ದೇಶಕರು,ಸಿ.ಇ.ಒ ಹಾಗು ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.



ತುಮಕೂರು ಜಿಲ್ಲಾ ಫೋಟೋ ಮತ್ತು ವಿಡಿಯೋಗ್ರಾಫರ್ ಸಂಘದ ವತಿಯಿಂದ ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘಕ್ಕೆ ಜಿಲ್ಲೆಯಿಂದ ನಿರ್ದೇಶಕ ಸ್ಥಾನಕ್ಕೆ ಸ್ನೇಹ ನವೀನ್ ರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಜಿಲ್ಲಾ ಛಾಯಾಗ್ರಾಹಕರ ಸಂಘದ ಅಧ್ಯಕ್ಷರಾದ ಅನಿಲ್ ಕುಮಾರ್ ಟಿ.ಹೆಚ್., ಮೋಹನ್, ಛಾಯಾಚಿತ್ರಗ್ರಾಹಕರ ಸಂಘದ ಜಿಲ್ಲೆಯ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

## ಜನವರಿ 8ಕ್ಕೆ ಸನ್ ರೈಸ್ ಸಂಭ್ರಮ

ಗುಬ್ಬಿ : ಹೊಸಕೆರೆ ಸನ್ ರೈಸ್ ಶಾಲೆಯಲ್ಲಿ ಶಾಲಾವಾರ್ಷಿಕೋತ್ಸವ ಸಮಾರಂಭ, ಸನ್ ರೈಸ್ ಸಂಭ್ರಮ ಗುರುವಾರ ಸಂಜೆ 4 ಗಂಟೆಗೆ ನೆಡೆಯಲಿದೆ.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸನ್ ರೈಸ್ ಶಾಲೆಯ ಆಡಳಿತಮಂಡಳಿಯ ಉಪಾಧ್ಯಕ್ಷ ಆರ್, ವಿಜಯಕುಮಾರ್ ವಹಿಸುವರು. ಹೊಸಕೆರೆ ಗ್ರಾಮಪಂಚಾಯಿತಿ ಅಧ್ಯಕ್ಷ ಪಿ, ಎಸ್,ರೇಣುಕಯ್ಯ ಉದ್ಘಾಟಿಸಲಿದ್ದು ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ, ಎಸ್, ನಟರಾಜು ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಪಾರ್ವತಮ್ಮ ಭಾಗವಹಿಸಲಿದ್ದಾರೆ.ವಿಶೇಷ ಆಹ್ವಾನಿತರಾಗಿ ಸರಿಗಮಪ ಖ್ಯಾತಿಯ ಕಂಬದರಂಗಯ್ಯ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕವೃಂದ, ಸಿಬ್ಬಂದಿ ಭಾಗವಹಿಸಲಿದ್ದಾರೆ. ವಿಶೇಷವಾಗಿ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದು ಪೋಷಕರು, ಅಕ್ಕಪಕ್ಕದ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಸಿ, ಎನ್, ಬಸವರಾಜು ವಿದ್ಯಾರ್ಥಿಗಳು ಮನವಿಮಾಡಿದ್ದಾರೆ.

## ಜ.8, 9ರಂದು ವಿದ್ಯುತ್ ವ್ಯತ್ಯಯ

ತುಮಕೂರು:ಬೆಸ್ಕಾಂ ಶಿರಾ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಜನವರಿ 8 ಮತ್ತು 9ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಯಲಿಯೂರು, ಕೊಟ್ಟ, ಬಂದಕುಂಟೆ, ಮೇಲ್ಕುಂಟೆ, ಭೂವನಹಳ್ಳಿ ಪಂಚಾಯತಿಯ ಗ್ರಾಮಗಳು, ಶಿವಾಜಿನಗರ ಆರ್.ಎಂ.ಸಿ. ಮಾರ್ಕೆಟ್ ಮುಂಭಾಗ, ಕೆ.ಎಸ್. ಆರ್.ಟಿ.ಸಿ. ಡಿಪೋ ಹಿಂಭಾಗದ ಸಂತೆಪೇಟೆ, ಜ್ಯೋತಿನಗರ, ಸಚೀನ್ ಲೇಔಟ್, ನಾಗಜ್ಜಿಗುಡ್ಲು ಮತ್ತು ಶಿರಾ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ

## ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ತುಮಕೂರು: ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ ಪಾಲುದಾರಿಕೆ ಸಂಸ್ಥೆ/ ಕಂಪನಿ/ ಜವಳಿ ಸಹಕಾರಿ ಸಂಘ/ ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತೀಸಣ್ಣ ಘಟಕಗಳನ್ನು ಸ್ಥಾಪಿಸಲು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಣ್ಣ ಮತ್ತು ಅತಿ ಸಣ್ಣ ಘಟಕಗಳನ್ನು ಸ್ಥಾಪಿಸಲು ಈಗಾಗಲೇ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದ ಹಾಗೂ ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಪಡೆದಿರುವ ಅರ್ಹ ಘಟಕಗಳು ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಜನವರಿ 31ರೊಳಗಾಗಿ ಸಲ್ಲಿಸಬೇಕು.

ಯೋಜನೆ ಕುರಿತು ಪೂರ್ಣ ಮಾಹಿತಿಯನ್ನು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಾಗನಿಲಯ, 5ನೇ ಮುಖ್ಯರಸ್ತೆ, ಸಿದ್ದಗಂಗಾ ಬಡಾವಣೆ, ತುಮಕೂರು ಅಥವಾ ದೂ.ವಾ.ಸಂ. 0816–2275370ಯನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತುಮಕೂರಿನಲ್ಲಿ 11 ಮಂಗಗಳ ನಿಗೂಢ ಸಾವು! ವಿಷಪ್ರಾಶನ ಮಾಡಿಸಿರುವ ಶಂಕೆ

ತುಮಕೂರು:: ಒಂದು ತಿಂಗಳ ಹಿಂದೆಯಷ್ಟೇ ಬೆಳಗಾವಿಯಲ್ಲಿ 30 ಕೃಷ್ಣಮೃಗಗಳು ನಿಗೂಢವಾಗಿ ಸಾವನ್ನಪ್ಪಿರುವುದು ಆತಂಕ ಮೂಡಿಸಿತ್ತು. ಇದೀಗ ತುಮಕೂರಿನಲ್ಲಿಯೂ ಅಂತದ್ದೇ ಪ್ರಕರಣ ಬೆಳಕಿಗೆ ಬಂದಿದೆ. ದೇವರಾಯನದುರ್ಗ ಅರಣ್ಯ ಪ್ರದೇಶದಲ್ಲಿ ಕೇವಲ ಎರಡು ದಿನಗಳಲ್ಲಿ 11 ಮಂಗಗಳು ನಿಗೂಢವಾಗಿ ಮೃತಪಟ್ಟಿದ್ದು, ವಿಷಪ್ರಾಶನವಾಗಿರುವ ಶಂಕೆ ವ್ಯಕ್ತವಾಗಿದೆ.



ಮಂಗಗಳು ಯಾವುದೇ ಸೋಂಕಿನಿಂದ ಮೃತಪಟ್ಟಿಲ್ಲವೆಂಬುದು ದೃಢ ದೇವರಾಯನದುರ್ಗ ಹಾಗೂ ದುರ್ಗದ ಹಳ್ಳಿ ನಡುವಿನ ಅರಣ್ಯ ಪ್ರದೇಶದಲ್ಲಿ ಕಳೆದ ಎರಡು ದಿನಗಳಲ್ಲಿ ಮಂಗಗಳ ಮೃತದೇಹಗಳು ಪತ್ತೆಯಾಗಿವೆ. ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದು, ಒಂದರ ನಂತರ ಮತ್ತೊಂದರಂತೆ ಮಂಗಗಳ ಮೃತದೇಹಗಳು ಪತ್ತೆ ಮಾಡಿದ್ದಾರೆ. ಅರಣ್ಯ ಪ್ರದೇಶದಲ್ಲಿ ನಡೆಸಿದ ಶೋಧ ಕಾರ್ಯದ ವೇಳೆ ಮೊದಲ ದಿನ ಏಳು ಮಂಗಗಳು, ಎರಡನೇ ದಿನ ನಾಲ್ಕು ಮಂಗಗಳ ಮೃತದೇಹಗಳು ಪತ್ತೆಯಾಗಿವೆ. ಪತ್ತೆಯಾದ 11 ಮೃತದೇಹಗಳಲ್ಲಿ ಒಂಬತ್ತು ಸಾಮಾನ್ಯ ಮಂಗಗಳು ಹಾಗೂ ಎರಡು ಲಂಗೂರಗಳು ಎನ್ನಲಾಗಿದೆ. ಪ್ರಾಥಮಿಕ ಪರಿಶೀಲನೆಯಲ್ಲಿ ಮಂಗಗಳು ಯಾವುದೇ ಸೋಂಕು ಅಥವಾ ಕಾಯಿಲೆಯಿಂದ ಮೃತಪಟ್ಟಿಲ್ಲ ಎಂಬುದು ತಿಳಿದುಬಂದಿದೆ.

ಬೆಂಗಳೂರಿನ ಪಶು ವೈದ್ಯಕೀಯ ವಿದ್ಯಾಲಯಕ್ಕೆ ಸ್ಯಾಂಪಲ್ ರವಾನೆ ಅರಣ್ಯಾಧಿಕಾರಿಗಳು ಸಾವಿನ ಕಾರಣ ಪತ್ತೆ ಹಚ್ಚಲು ಮುಂದಾಗಿ, ಊರ್ಡಿಗೆರೆಯ ಪಶು ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ. ಪರೀಕ್ಷೆಯ ವೇಳೆ ಮಂಗಗಳ ಕರುಳಿನಲ್ಲಿ ಅನ್ನ ಪತ್ತೆಯಾಗಿದ್ದು, ವಿಷ ಪ್ರಾಶನದಿಂದ ಸಾವಾಗಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಇದನ್ನು ದೃಢಪಡಿಸಲು ಕೆಲವು ಮಾದರಿಗಳನ್ನು ಬೆಂಗಳೂರಿನ ಪಶು ವೈದ್ಯಕೀಯ ವಿದ್ಯಾಲಯಕ್ಕೆ ರವಾನೆ ಮಾಡಲಾಗಿದೆ. ಈ ಘಟನೆ ಸಂಬಂಧ ತುಮಕೂರು ಪ್ರಾದೇಶಿಕ ವಲಯದ ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡಿದ್ದು, ಮಂಗಗಳ ಸಾವಿನ ಹಿಂದಿರುವ ಕಾರಣ ಹಾಗೂ ದುಷ್ಕೃತ್ಯವಿದೆಯೇ ಎಂಬುದರ ಕುರಿತು ತನಿಖೆ ಮುಂದುವರಿದಿದೆ.

ತುಮಕೂರು : ಇತ್ತೀಚೆಗೆ ಜ್ಞಾನ ಪ್ರಕಾಶ ಸ್ವಾಮೀಜಿಯವರನ್ನು ಸ್ವಘೋಷಿತ ಸ್ವಾಮಿಗಳು ಹಾಗೆ ಹೀಗೆ ಎಂದು ಅವಹೇಳನಕಾರಿಯಾಗಿ ಕೆಲವರು ಮಾತನಾಡಿರುತ್ತಾರೆ. ಆದರೆ ಕಳೆದ 25 ವರ್ಷಗಳಿಂದ ಮಠದ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಮಠದ ಅಭಿವೃದ್ಧಿಗೆ ಶ್ರಮಿಸಿ, ಪ್ರಗತಿಪರ ಚಿಂತನೆಯಲ್ಲಿ ಇಡೀ ರಾಜ್ಯದ್ಯಂತ ಶೋಷಿತರ ದಮನಿತರ ಗಟ್ಟಿದನಿಯಾಗಿ ನಿಂತಿರುವ ಪ್ರಜ್ಞಾವಂತರಲ್ಲಿ ಇವರು ಸಹ ಪ್ರಮುಖರು. ಸ್ವಾಮೀಜಿಯವರ ನೇರ ನಿಷ್ಠೂರ ಮಾತುಗಳು ಕೆಲವರಿಗೆ ನಿದ್ದೆ ಗೆಡಿಸಿದ್ದು ಸಹಜ, ಆದರೆ ಈ ರೀತಿಯ ಆಪಾದನೆ ಅಪವಾದಗಳು ಸಲ್ಲದು, ಸ್ವಾಮೀಜಿಗಳ ಬಗ್ಗೆ ನಿಷ್ಠೂರವಾಗಿ ಮಾತನಾಡಿರುವವರು ಬಹಿರಂಗವಾಗಿ ಕ್ಷಮೆಯಾಚಿಸಬೇಕು, ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟವನ್ನು ಮಾಡಬೇಕಾಗುತ್ತದೆಂದು ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ರಾಜ್ಯ ಉಪಾಧ್ಯಕ್ಷರಾದ ಡಿ.ಕೆ.ಇಂದ್ರಕುಮಾರ್ ರವರು ಇಂದು ಪ್ರಕತಣೆಯಲ್ಲಿ ತಿಳಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ದೇಶದಲ್ಲಿರುವ 80 ಲಕ್ಷ ಪಿಂಚಣಿದಾರರ ಪರವಾಗಿ ನ್ಯಾಷನಲ್ಆಂದೋಲನ ಸಮಿತಿ(ಎನ್.ಎ.ಸಿ) ಹೋರಾಟ

ತುಮಕೂರು:ದೇಶದಲ್ಲಿರುವ 80 ಲಕ್ಷ ಪಿಂಚಣಿದಾರರ ಪರವಾಗಿ ನ್ಯಾಷನಲ್ಆಂದೋಲನ ಸಮಿತಿ(ಎನ್.ಎ.ಸಿ) ಹೋರಾಟ ನಡೆಸುತ್ತಿದ್ದು, ಇಂದಲ್ಲ,ನಾಳೆ ಕನಿಷ್ಠ ಪಿಂಚಣಿ ಮತ್ತು ಹೆಚ್ಚುವರಿ ಪಿಂಚಣಿ ಪಡೆಯುವುದು ಸತ್ಯಎಂದು ಎನ್.ಎ.ಸಿ.ಯ ರಾಷ್ಟ್ರೀಯ ಮುಖ್ಯ ಸಂಯೋಜಕರಮಾಕಾಂತ್ ನರಗುಂದ ತಿಳಿಸಿದ್ದಾರೆ.

ನಗರದ ಶ್ರೀಕೊಲ್ಲಾಪುರದಮ್ಮ ಸಮುದಾಯಭವನದಲ್ಲಿಕೆ.ಎಸ್. ಆರ್.ಟಿ.ಸಿ. ತುಮಕೂರು ವಿಭಾಗದ ನಿವೃತ್ತ ನೌಕರರಕ್ಷೇಮಾಭಿವೃದ್ದಿಟ್ರಸ್ಟ್ (ರಿ),ತುಮಕೂರು ವತಿಯಿಂದ ಆಯೋಜಿಸಿದ್ದ ಟ್ರಸ್ಟ್‌ನ ಮೊದಲ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡುತಿದ್ದಅವರು,ದೇಶದಅಭಿವೃದ್ದಿಗಾಗಿ ವಿವಿಧ ನಿಗಮ, ಮಂಡಳಿಗಳಲ್ಲಿ ಕೆಲಸ ಮಾಡಿರುವ ನಾವುಗಳು, ಸಂಧ್ಯಾಕಾಲದಲ್ಲಿಗೌರವಯುತಜೀವನ ನಡೆಸುವ ಸಲುವಾಗಿ ಕನಿಷ್ಠ ಪಿಂಚಣಿ ಹಾಗೂ ಅರ್ಹರಿಗೆ ಹೆಚ್ಚುವರಿ ಪಿಂಚಣಿ ನೀಡುವುದು ನಮ್ಮನ್ನು ದುಡಿಸಿಕೊಂಡು ಹೊರ ಹಾಕಿರುವ ಸಂಸ್ಥೆಗಳು ಮತ್ತು ಸರಕಾರಗಳ ಕರ್ತವ್ಯವಾಗಿದೆ .ಹಲವಾರು ವರ್ಷಗಳ ನಮ್ಮ ಹೋರಾಟ ನಿರ್ಣಾಯಕ ಹಂತದಲ್ಲಿದ್ದು,2026ರ ಫೆಬ್ರವರಿಅಥವಾ ಮಾರ್ಚ ತಿಂಗಳಲ್ಲಿ ಕನಿಷ್ಠ ಮಾಸಿಕ 7500 ರೂ ಪಿಂಚಣಿ ವ್ಯವಸ್ಥೆಯನ್ನು ಸರಕಾರ ಜಾರಿಗೊಳಿಸಲಿದೆ ಎಂಬ ದೃಢ ನಂಬಿಕೆ ನಮಗಿದೆ. ಆಗ ಇದೇ ವೇದಿಕೆಯಲ್ಲಿ ಸಂಭ್ರಮಆಚರಿಸೋಣಎಂದರು. ಸರಕಾರಕ್ಕೆಈಗಾಗಲೇಕನಿಷ್ಠಪಿಂಚಣಿಮತ್ತುಹೆಚ್ಚುವರಿಪಿಂಚಣಿಕುರಿತುಸಾಕಷ್ಟು ಮನವಿ ಸಲ್ಲಿಸಿ, ಹೋರಾಟವನ್ನು ನಡೆಸಲಾಗಿದೆ.ಅಲ್ಲದೆ ಸರಕಾರದಉನ್ನತ ಅಧಿಕಾರಿಗಳೊಂದಿಗೂ ಚರ್ಚೆ ನಡೆಸಿ,ನಮ್ಮ ಸಮಸ್ಯೆಯನ್ನು ಮನವರಿಕೆ ಮಾಡಿಕೊಡಲಾಗಿದೆ.ಅಲ್ಲದೆ ಸುಪ್ರಿಂಕೋರ್ಟುಕೂಡ ಕನಿಷ್ಠ ಪಿಂಚಣಿ ಹೆಚ್ಚಳಕ್ಕೆ ಆದೇಶ ಮಾಡಿದೆ.ರಾಷ್ಟ್ರೀಯಆಂದೋಲನ ಸಮಿತಿ ಸುಮಾರು 22 ರಾಜ್ಯಗಳಲ್ಲಿ ಕೆಲಸ ಮಾಡುತಿದ್ದು, 80 ಲಕ್ಷ ಪಿಂಚಣಿದಾರರ ಪ್ರತಿನಿಧಿಯಾಗಿ ಸರಕಾರದೊಂದಿಗೆ ವ್ಯವಹರಿಸುತಿದೆ.ಪಿಂಚಣಿ ವಿಚಾರವಾಗಿಯೇ ನಿವೃತ್ತ ನೌಕರರ ಸಂಘದಜನವರಿ 13 ರಂದುರಾಷ್ಟ್ರವ್ಯಾಪ್ತಿ ಮುಷ್ಕರ ನಡೆಸುತ್ತಿದ್ದು,ಇವರಿಗೆ ನಮ್ಮ ಸಂಘ ಸಹ ಬೆಂಬಲ ಘೋಷಿಸಿ,ಮುಷ್ಕರದಲ್ಲಿ ಪಾಲ್ಗೊಳ್ಳಲಿದೆ. ತಾವುಗಳು ಸಹ ಭಾಗವಹಿಸುವಂತೆರಮಾಕಾಂತ್ ನರಗುಂದಅವರು ಮನವಿ ಮಾಡಿದರು.



ಕನ್ನಡ ಸೇನೆ ಜಿಲ್ಲಾಧ್ಯಕ್ಷಧನಿಯಕುಮಾರ್ ಮಾತನಾಡಿ, ಕೆ.ಎಸ್. ಆರ್.ಟಿ.ಸಿ.ಯ ಎಲ್ಲಾ ಹೋರಾಟಗಳಿಗೆ ಕನ್ನಡ ಪರ ಸಂಘಗಳ ಕೈಜೋಡಿಸಿವೆ.ಮಹಾರಾಷ್ಟ್ರದಲ್ಲಿ ಕರ್ನಾಟಕದ ಸಾರಿಗೆ ಬಸ್ ಸಿಬ್ಬಂದಿಯ ಮೇಲೆ ಹಲ್ಲೆಯಾದಾಗ, ಹಲ್ಲೆಗೊಳಗಾದ ಸಂತ್ರಸ್ಥರ ಪರವಾಗಿಕನ್ನಡ ಸೇನೆ ಹೋರಾಟ ನಡೆಸಿದೆ.ಮುಂದೆಯೂ ಕೆ.ಎಸ್.ಆರ್.ಟಿ.ಸಿ ನೌಕರರ ಪರವಾಗಿಎಲ್ಲಾರೀತಿಯ ಹೋರಾಟಕ್ಕೂ ಸಿದ್ದ ಎಂದರು.

ಇಪಿಎಸ್–95 ಸಾರಿಗೆ ನಿವೃತ್ತ ನೌಕರರ ಸಂಘದಉಪಾಧ್ಯಕ್ಷರಾದಆರ್.ಸುಬ್ಬಣ್ಣ ಮಾತನಾಡಿ,ಕೆ.ಎಸ್.ಆರ್.ಟಿ.ಸಿ ಪಿಂಚಣಿಗೆ ಸಂಬಂಧಿಸಿದಂತೆ ಸರಕಾರದ ನೀತಿಗಳು ಬದಲಾಗಬೇಕೆಂಬ ಉದ್ದೇಶದಿಂದ ಹಲವಾರು ಹೋರಾಟಗಳನ್ನು ಮಾಡಿಒಂದು ಹಂತಕ್ಕೆ ಯಶಸ್ವಿಯಾಗಿದ್ದೇವೆ.ಸರಕಾರ ನಮ್ಮ ಬೇಡಿಕೆಗಳಿಗೆ ಮನ್ನಣೆ ನೀಡಿರುವುದಲ್ಲದೆ, ತಪ್ಪಿನ ಅರಿವಾಗಿದೆ.2025ರ ಅಕ್ಟೋಬರ್ 13 ರಂದು ಸರಕಾರವೇ ಲಿಖಿತರೂಪದಲ್ಲಿ ಬೇಡಿಕೆಈಡೇರಿಸುವ ಭರವಸೆ ನೀಡಿದೆ. ಇದಕ್ಕೆಕಾರಣದೆಹಲಿ ಚಲೋದಂತಹ ಕಾರ್ಯಕ್ರಮಗಳಲ್ಲಿ ನಾವು ಪ್ರದರ್ಶಿಸಿದ ಒಗ್ಗಟ್ಟು. ಹಾಗಾಗಿ ಮುಂಬರುವ ಹೋರಾಟಗಳಲ್ಲಿಯೂ ತಾವೆಲ್ಲರೂ ಸಂಘದೊಂದಿಗೆಕೈಜೋಡಿಸಬೇಕೆಂದರು.

ನಿವೃತ್ತ ಕೆ.ಎಸ್.ಆರ್.ಟಿ.ಸಿ ಡೀಸಿ ಗಜೇಂದ್ರಕುಮಾರ್ ಮಾತನಾಡಿ,ನಿವೃತ್ತ ನೌಕರರ ಕಷ್ಟ, ಸುಖಃಗಳನ್ನು ಹಂಚಿಕೊಳ್ಳಲು ಒಂದು ವೇದಿಕೆ ನಿರ್ಮಿಸಿ, ಎಲ್ಲ ನೌಕರರ ಚಟುವಟಿಕೆ ಇರುವಂತೆ ಮಾಡಿರುವತುಮಕೂರುಘಟಕ ಒಳ್ಳೆಯ ಕೆಲಸ ಮಾಡಿದೆ.ಕೆ.ಎಸ್.ಆರ್.ಟಿ.ಸಿ ಯಂತಹ ನಿಗಮಗಳಲ್ಲಿ ಕೆಲಸ ಮಾಡುವ ನೌಕರರು ನೌಕರಿಯಲ್ಲಿಇದ್ದಾಗಲೇ ಯೋಚಿತ ಜೀವನ ನಡೆಸಬೇಕು.ಮಕ್ಕಳ ಶಿಕ್ಷಣ, ಮನೆ, ವಾಹನಗಳ ಸಾಲ ಹೀಗೆ ಎಲ್ಲವನ್ನು ನಿಭಾಯಿಸುವುದು ಸವಾಲಿನ ಕೆಲಸ. ಅಲ್ಲದೆ ನಿವೃತ್ತಿ ನಂತರಆರೋಗ್ಯಕರಜೀವನವೂ ಮುಖ್ಯ. ಹಾಗಾಗಿ ಸದಾಚಟುವಟಿಕೆಯಿಂದಇರುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಅಧ್ಯಕ್ಷತೆ ವಹಿಸಿದ್ದ ಕೆ.ಎಸ್.ಆರ್.ಟಿ.ಸಿ ತುಮಕೂರು ವಿಭಾಗೀಯ ನಿಯಂತ್ರಣಾಧಿಕಾರಿಜಗದೀಶ್ ಮಾತನಾಡಿ, ತುಮಕೂರುಜಿಲ್ಲಾ ಕೆ.ಎಸ್.ಆರ್.ಟಿ.ಸಿ ನೌಕರರಕ್ಷೇಮಾಭಿವೃದ್ದಿಟ್ರಸ್ಟ್ ಸಕ್ರಿಯವಾಗಿದೆ.ಸಂಸ್ಥೆಯ ಏಳಿಗೆಗಾಗಿ ಹಲವಾರು ನಿವೃತ್ತ ನೌಕರರ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದದುಡಿದಿದ್ದಾರೆ.ಆದರ ಫಲವೇ ಇಂದು ನಾವು ಲಕ್ಸುರಿ ಬಸ್ಸುಗಳು,ಹತ್ತಾರು ಟ್ರಿಪ್ ಮಾಡಲು, ಒಳ್ಳೆಯ ಬಸ್ ನಿಲ್ದಾಣ ಹೊಂದಲು ಸಾಧ್ಯವಾಗಿದೆ. ಸಂಧ್ಯಾಕಾಲದಲ್ಲಿ ನಿಮ್ಮನ್ನುಗೌರವಯುತವಾಗಿ ನಡೆಸಿಕೊಳ್ಳಬೇಕು.ಈ ನಿಟ್ಟಿನಲ್ಲಿ ನಾವು ನಿಮ್ಮಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಲಿದ್ದೇವೆಎಂದು ಭರವಸೆ ನೀಡಿದರು.

ಎನ್.ಎ.ಸಿ.ಯ ರಾಷ್ಟ್ರೀಯ ಪ್ರಧಾನ ಸಂಯೋಜಕರಾದರಮಾಕಾಂತ ನರಗುಂದಅವರನ್ನುಅಭಿನಂದಿಸಲಾಯಿತು.ಟ್ರಸ್ಟ್‌ನಅಧ್ಯಕ್ಷರಾದ ಭೀಮಾನಾಯ್ಕ್ ಪ್ರಾಸ್ತಾವಿಕವಾಗಿ ಮಾತನಾಡಿದರು.ವೇದಿಕೆಯಲ್ಲಿ

# ಕುಡಿದು ವಾಹನ ಚಲಾಯಿಸಬೇಡಿ:

ತುರುವೇಕೆರೆ: ಕುಡಿದು ವಾಹನ ಚಲಾಯಿಸಬೇಡಿ ಎಂದು ಪಟ್ಟಣದ ಪಿ ಎಸ್ ಐ ಮೂರ್ತಿ ಟಿ ರವರು (ತುಮಕೂರು ಜಿಲ್ಲಾ ಪೊಲೀಸ್) ತುರುವೇಕೆರೆ ಪೊಲೀಸ್ ಠಾಣೆ ವತಿಯಿಂದ ಪ್ರಸ್ತುತ ಸಾಲಿನ "ರಸ್ತೆ ಸುರಕ್ಷತಾ ಜಾಗೃತಿ ಸಪ್ತಾಹ" ಅಭಿಯಾನ ಕಾರ್ಯಕ್ರಮದಲ್ಲಿ ಹೇಳಿದರು.

ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರಾದ "ಮೂರ್ತಿ ಟಿ" ರವರ ನೇತೃತ್ವದಲ್ಲಿ ಪಟ್ಟಣದಲ್ಲಿ ಸೋಮವಾರ ಶಾಲಾ ವಿದ್ಯಾರ್ಥಿಗಳ ಜೊತೆಗೂಡಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕಾಲ್ನಡಿಗೆಯ ಮೂಲಕ "ಹೆಲ್ಮೆಟ್ ಧರಿಸಿ ಪ್ರಾಣ ಉಳಿಸಿ"ಎಂಬ ಘೋಷಣೆಯೊಂದಿಗೆ ಸಾರ್ವಜನಿಕವಾಗಿ ಅರಿವು ಮೂಡಿಸಲಾಯಿತು.

ಪಟ್ಟಣದ ಬಾಣಸಂದ್ರ ಸರ್ಕಲ್ ಆವರಣದಲ್ಲಿ ವೃತ್ತಾಕಾರದಲ್ಲಿ ವಿದ್ಯಾರ್ಥಿಗಳನ್ನು ಮತ್ತು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಪಿ.ಎಸ್.ಐ. ಮೂರ್ತಿ ಟಿ ರವರು ಅಪಘಾತದಂತಹ ಸಮಯಗಳಲ್ಲಿ ವಾಹನ ಸವಾರರು ಸರಿಯಾದ ಸುರಕ್ಷತಾ ಕ್ರಮಗಳನ್ನು ಅನುಸರಿಸದೇ ತಮ್ಮ ಪ್ರಾಣಕ್ಕೆ ಕುತ್ತು ತಂದುಕೊಂಡಿದ್ದಾರೆ. ಪ್ರತಿಯೊಬ್ಬ ವಾಹನ ಸವಾರರು ರಸ್ತೆಯಲ್ಲಿ ತಮ್ಮ ವಾಹನಗಳನ್ನು ಚಲಾಯಿಸುವಾಗ ಸಂಚಾರಿ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು ಮತ್ತು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ಚಾಲನೆ ಮಾಡಬೇಕು.

ನಿರ್ಲಕ್ಷ ತೋರಿದರೆ ಅನಾಹುತಗಳು ಮತ್ತು ನಿಯಮಗಳನ್ನು ಮೀರಿದರೆ ಅಪಾಯಗಳು ಕಟ್ಟಿಟ್ಟ ಬುತ್ತಿ, ಅತಿ ವೇಗ, ಅವಸರದ ವೇಗ, ಸಿಗ್ನಲ್ ರೂಲ್ಸ್ ಬ್ರೇಕ್ ಮಾಡುವುದು. ಕುಡಿದು ವಾಹನ ಚಲಾಯಿಸುವುದು ಕಾನೂನಿಗೆ ವಿರುದ್ಧವಾಗಿವೆ. ಇಂತಹ ಸಂದರ್ಭದಲ್ಲಿ ಮನೆಯಲ್ಲಿ ತಮಗಾಗಿ ತಮ್ಮ ಕುಟುಂಬಗಳು ಕಾಯುತ್ತಿರುತ್ತವೆ ಮರೆಯಬೇಡಿ. ಕಾರನ್ನು ಚಲಾಯಿಸುವಾಗ ಸೀಟ್ ಬೆಲ್ಟ್. ಬೈಕ್ ಗಳನ್ನು ಚಲಾಯಿಸುವಾಗ ಹೆಲ್ಮೆಟ್ ಧರಿಸಿ ಸಂಚಾರಿ ನಿಯಮಗಳನ್ನು ಪಾಲಿಸಿ ಕಾನೂನನ್ನು ಗೌರವಿಸಿ ತಮ್ಮ ಸುರಕ್ಷತೆಯನ್ನು ಸಹ ಕಾಪಾಡಿಕೊಳ್ಳಬೇಕೆಂದು ಸಾರ್ವಜನಿಕವಾಗಿ ವಿಶೇಷವಾಗಿ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಪಟ್ಟಣದ ಹಲವಾರು ಶಾಲೆಯ ವಿದ್ಯಾರ್ಥಿಗಳು, ಪೊಲೀಸ್ ಠಾಣೆಯ ಸಿಬ್ಬಂದಿಗಳು, ಸಾರ್ವಜನಿಕರು ಮುಂತಾದವರು ಪಾಲ್ಗೊಂಡಿದ್ದರು.

# ಲೋಕ ಕಲ್ಯಾಣಾರ್ಥವಾಗಿ ಲಕ್ಷ ದ್ರವ್ಯ ಶ್ರೀ ಶಕ್ತಿ ಮಹಾಗಣಪತಿ ಹೋಮ



ತುಮಕೂರು– ಲೋಕ ಕಲ್ಯಾಣಾರ್ಥವಾಗಿ ನಗರದಲ್ಲಿ ಕಳೆದ ಶನಿವಾರದಿಂದ ಬುಧವಾರದವರೆಗೆ ಅದ್ದೂರಿಯಿಂದ ಅಷ್ಟ ಲಕ್ಷ ದ್ರವ್ಯ ಶ್ರೀ ಶಕ್ತಿ ಮಹಾಗಣಪತಿ ಹೋಮ ಶ್ರದ್ಧಾಭಕ್ತಿಯಿಂದ ನಡೆಯುತ್ತಿದೆ.

ನಗರದ ಸೋಮೇಶ್ವರ ಪುರಂನ 3ನೇ ಕ್ರಾಸ್ ನಲ್ಲಿರುವ ಗಾಣದಾಳ್ ಆಸ್ಪತ್ರೆ ಪಕ್ಕದ ಬೃಹತ್ ಜಾಗದಲ್ಲಿ ಪ್ರಧಾನ ಪುರೋಹಿತ್ ಕೆ.ವಿ. ರಮೇಶ್ ಶರ್ಮರವರ ನೇತೃತ್ವದಲ್ಲಿ ಟಿ.ಎನ್.ಲೋಕೇಶ್ ಮತ್ತು ಎಲ್.ಜಯಂತ್ ಸೇರಿದಂತೆ 15 ಆಗಮಿಕರು ನೂರಾರು ಭಕ್ತಾದಿಗಳ ಸಮ್ಮುಖದಲ್ಲಿ ಮಂತ್ರ ಪಠಣದೊಂದಿಗೆ ಸಾಮೂಹಿಕವಾಗಿ ಹೋಮಾದಿಗಳನ್ನು ನೇರವೇರಿಸಿದರು.

ನಾಲ್ಕು ದಿನಗಳ ಕಾಲ ನಡೆಯುವ ಹೋಮಾದಿಗಳಿಗೆ 1 ಲಕ್ಷ ಮೋದಕ, 1 ಲಕ್ಷ ಬಾಳೆಹಣ್ಣು, 1 ಲಕ್ಷ ಕಬ್ಬು, 1 ಲಕ್ಷ ಮಧುಪರ್ಕ, 1 ಲಕ್ಷ ಗರಿಕೆ, 1 ಲಕ್ಷ ಪಂಚಕಜ್ಜಾಯ, 1 ಲಕ್ಷ ಆಜ್ಯ, 1 ಲಕ್ಷ ಚರು ಅನ್ನ ಇವುಗಳನ್ನು ಬಳಸಲಾಗುತ್ತಿದ್ದು, ಮಂಗಳವಾರ ರಾತ್ರಿ ಅಂಗಾರಕ ಸಂಕಷ್ಟ ಚತುರ್ಥಿ ಪ್ರಯುಕ್ತ ಅಷ್ಟ ಲಕ್ಷ ದ್ರವ್ಯ ಶ್ರೀ ಶಕ್ತಿ ಮಹಾಗಣಪತಿ ಹೋಮದ ಅಂಗವಾಗಿ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಮಹಾ ಪೂರ್ಣಾಹುತಿಯನ್ನು ನೇರವೇರಿಸಲಾಗುವುದು ಎಂದು ಹೊಳವನಹಳ್ಳಿಯ ಪ್ರಧಾನ ಆಗಮಿಕರಾದ ಕೆ.ವಿ.ರಮೇಶ್ ಶರ್ಮ ತಿಳಿಸಿದ್ದಾರೆ.

ಭಕ್ತಾದಿಗಳು ಈ ಧಾರ್ಮಿಕ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕು ಎಂದು ಅವರು ಕೋರಿದ್ದಾರೆ.

ಮಂಗಳವಾರ ರಾತ್ರಿ ಹೋಮಾದಿಗಳು ಮುಗಿದ ನಂತರ ಬುಧವಾರದಂದು ದಾಸೋಹ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಈ ಧಾರ್ಮಿಕ ಕಾರ್ಯದಲ್ಲಿ ಶ್ರೀನಿವಾಸ್, ಸುಹಾಸ್, ಪಾರ್ಥಸಾರತಿ, ನಿಖಿಲ್, ನಾಗರಾಜು, ಅನುದೀಪ್ ಇವರುಗಳು ಆಗಮಿಕರಾಗಿ ಪಾಲ್ಗೊಂಡು ಹೋಮಾದಿಗಳನ್ನು ನೆರವೇರಿಸಿದರು.

# ಬೀದಿಬದಿ ವ್ಯಾಪಾರಿಗಳ ಅಭಿವೃದ್ಧಿ ನಿಗಮ ಸ್ಥಾಪನೆಗೆ ಎಸ್.ಪಿ.ಚಿದಾನಂದ್ ಒತ್ತಾಯ

ತುಮಕೂರು: ರಾಜ್ಯ ಸರ್ಕಾರ ಬೀದಿಬದಿ ವ್ಯಾಪಾರಿಗಳ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿ ಇಂತಹ ಸಣ್ಣ ವ್ಯಾಪಾರಿಗಳ ವ್ಯಾಪಾರವಹಿವಾಟಿಗೆ ಆರ್ಥಿಕ ಸಾಲಸೌಲಭ್ಯ ನೀಡಬೇಕು. ಬೀದಿ ವ್ಯಾಪಾರಿಗಳ ಬದುಕಿನ ಭದ್ರತೆಗೆ ವಿವಿಧ ಯೋಜನೆಗಳನ್ನು ರೂಪಿಸಿ ನೆರವಾಗಬೇಕು ಎಂದು ಸ್ಫೂರ್ತಿ ಡೆವಲಪರ್ಸ್‌ನ ಮಾಲೀಕ, ಬಿಜೆಪಿ ಮುಖಂಡ ಎಸ್.ಪಿ.ಚಿದಾನಂದ್ ಒತ್ತಾಯಿಸಿದರು.

ನಗರದ ಕೆ.ಆರ್.ಬಡಾವಣೆಯ ಶ್ರಮಜೀವಿ ಬೀದಿಬದಿ ವ್ಯಾಪಾರಿಗಳ ಸಂಘದ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್‌ಗೆ ನಮನ ಹಾಗೂ ಸಂಘದ ರಾಜ್ಯಾಧ್ಯಕ್ಷ, ಕನ್ನಡಪರ ಹಾಗೂ ಇತರೆ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಎಂ.ಗೋಪಿಯವರ ಹುಟ್ಟುಹಬ್ಬದ ಅಂಗವಾಗಿ ಸಾರ್ವಜನಿಕರಿಗೆ ವಿವಿಧ ಸವಲತ್ತು ವಿತರಿಸಿ ಮಾತನಾಡಿದರು.

ಸಂಘಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವವರು ಸಾರ್ವಜನಿಕರ ಹಿತಕಾಯುವ ಕಾರ್ಯದಲ್ಲಿ ಹೆಚ್ಚು ಕಾಳಜಿ ವಹಿಸಬೇಕು. ಅವರ ಧ್ವನಿಯಾಗಿ ನಿಲ್ಲಬೇಕು. ಶ್ರಮಜೀವಿ ಬೀದಿ ವ್ಯಾಪಾರಿಗಳ ಸಂಘದ ಅಧ್ಯಕ್ಷರಾಗಿರುವ ಎಂ.ಗೋಪಿಯವರು, ಕಷ್ಟಜೀವಿ ವ್ಯಾಪಾರಿಗಳಿಗೆ ಶಕ್ತಿಯಾಗಿ ಬೆಂಬಲಕ್ಕಿದ್ದಾರೆ. ಅವರ ಕಷ್ಟಸುಖಗಳಿಗೆ ಸ್ಪಂದಿಸಿ ನೆರವಾಗುತ್ತಿರುವುದು ಶ್ಲಾಘನೀಯ ಎಂದರು.

ಆರ್ಥಿಕವಾಗಿ ಶಕ್ತಿ ಇಲ್ಲದವರು ಬದುಕಿಗಾಗಿ ಬೀದಿಬದಿಯಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತಾ ಬದುಕು ನಿರ್ವಹಣೆ ಮಾಡಿಕೊಂಡಿದ್ದಾರೆ.



ಇವರ ವ್ಯವಹಾರಗಳಿಗೆ ಬ್ಯಾಂಕುಗಳು ಹಣ ಸಾಲ ಕೊಡಲು ಹಿಂಜರಿಯುತ್ತವೆ. ಹೀಗಾಗಿ ಅನಿವಾರ್ಯವಾಗಿ ಇವರು ಹೆಚ್ಚು ಬಡ್ಡಿದರದಲ್ಲಿ ಹಣ ಸಾಲ ತಂದು ನಿತ್ಯದ ವ್ಯವಹಾರ ಮಾಡಬೇಕಾದ ಸ್ಥಿತಿ ಇದೆ. ದುಡಿಮೆಯ ಲಾಭದಲ್ಲಿ ಹೆಚ್ಚಿನ ಹಣವನ್ನು ಸಾಲದ ಬಡ್ಡಿ ಕಟ್ಟಬೇಕಾಗುತ್ತದೆ. ಉಳಿದ ಅಲ್ಪಸ್ವಲ್ಪದರಲ್ಲಿ ಜೀವನ ನಿರ್ವಗಣೆ ಮಾಡಬೇಕಾಗಿದ್ದು, ಬದುಕು ಸುಧಾರಣೆ ಕಷ್ಟವಾಗಿದೆ. ಇಂತಹ ಬೀದಿ ವ್ಯಾಪಾರಿಗಳಿಗೆ ಸರ್ಕಾರ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿದರೆ ಸಹಾಯವಾಗುತ್ತದೆ ಎಂದು ಎಸ್.ಪಿ.ಚಿದನಂದ್ ಹೇಳಿದರು.

ಸಂಘದ ರಾಜ್ಯಾಧ್ಯಕ್ಷ ಎಂ.ಗೋಪಿ ಮಾತನಾಡಿ, ಸಂಘದ ಸದಸ್ಯರನ್ನು ಕುಟುಂಬದ ಸದಸ್ಯರಂತೇ ಭಾವಿಸಿ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಾ ಎಲ್ಲಾರೀತಿಯಲ್ಲೂ ನೆರವಾಗುತ್ತಾ ಬಂದಿದ್ದೇನೆ. ಇದೇ ಭಾವನೆಯಿಂದ ಸಂಘದ ಸದಸ್ಯರೊಂದಿಗೆ ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದೇನೆ, ಎಲ್ಲರೂ ಸಂಘಟಿತರಾಗಿ ಸಂಘವನ್ನು ಸದೃಢವಾಗಿ ಬೆಳೆಸಿದರೆ ಪರಸ್ಪರ ಸಹಕಾರದಿಂದ ಎಲ್ಲರೂ ಬೆಳೆಯಲು ಸಾದ್ಯವಾಗುತ್ತದೆ ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಪಿ.ಎನ್.ರಾಮಯ್ಯ ಮಾತನಾಡಿ, ಸಂಘಟನೆಯನ್ನು ಬಲವರ್ಧನೆಗೊಳಿಸಿದರೆ ಮುಂದಿನ ಹೋರಾಟಗಳಿಗೆ ದೊಡ್ಡ ಬಲ ಬರುತ್ತದೆ. ಸರ್ಕಾರದ ಸೌಲಭ್ಯ ಪಡೆಯಲು ಹಾಗೂ ಅನ್ಯಾಯವನ್ನು ತಡೆಯಲು ಹೋರಾಟ ಮಾಡಬೇಕಾಗುತ್ತದೆ ಎಂದರು.

ಸಮಾಜ ಸೇವಕ ನಟರಾಜಶೆಟ್ಟಿ, ಜಿಲ್ಲಾಧ್ಯಕ್ಷ ಎಸ್.ವಿ.ನಾಗರಾಜು, ಮುಖಂಡರಾದ ಸಿದ್ದು ಗೋಬಿ, ಕೃಷ್ಣ, ಸವಿತಾ, ಅನಿತಾ, ಭವ್ಯ, ಆನಂದ್ ಮೊದಲಾದವರು ಭಾಗವಹಿಸಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA.
CONTACT : 9901010109 GMAIL: suryapragathi2021@gmail.com.